ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 19 ಮೇ 9, 1982 ಬೆಲೆ 60 ಪೈಸೆ

ಪಾಲಿಟ್ ಬ್ಯೂರೋನಿಂದ :

ಅಮೃತಸರ ಘಟನೆಯ ಖಂಡನೆ

ಏಪ್ರಿಲ್ 26 ರಂದು ಅಮೃತಸರ್‌ನಲ್ಲಿ ನಡೆದ ಪ್ರಚೋದಾತ್ಮಕ ಘಟನೆ, ಪಂಜಾಬ್ ರಾಜ್ಯದಲ್ಲಿ ನೆಲೆಸಿರುವ ಎರಡು ಪ್ರಮುಖ ಜಾತಿಗಳೊಳಗೆ ಮತ್ತೊಮ್ಮೆ ಮತೀಯ ಭಾವನೆ ಕುದುರಿಸಲು ಕಾರಣೀಭೂತವಾಗಿದ್ದು, ಇದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಪಾಲಿಟ್ ಬ್ಯೂರೋ ಬಲವಾಗಿ ಖಂಡಿಸುತ್ತದೆ. ಕೆಲವು ತಿಂಗಳ ಹಿಂದೆ ಇಂಡಿಯನ್ ಏರ್‌ಲೈನ್ಸ್ ವಿಮಾನವನ್ನು ಪಾಕಿಸ್ತಾನಕ್ಕೆ ಅಪಹರಿಸಿಕೊಂಡು ಹೋದ ದಲ್‌ಖಾಲ್ಸಾ ಸದಸ್ಯರೇ ಈ ಕ್ರೂರ ಘಟನೆಯ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಇದು ರಾಷ್ಟ್ರೀಯ ವಿರೋಧಿಯೆಂದು ಪಾರ್ಟಿ ಆವಾಗಲೇ ಖಂಡಿಸಿತ್ತು. ಅಮೇರಿಕದ ಸಾಮ್ರಾಜ್ಯಶಾಹಿಗಳ ಏಜಂಟರುಗಳ ಪ್ರೋತ್ಸಾಹ, ಬೆಂಬಲದಿಂದ ಖಲಿಸ್ತಾನವೆಂಬ ಪ್ರತ್ಯೇಕ ರಾಜ್ಯ ರಚನೆಯ ಘೋಷಣೆ ಕೂಗುತ್ತಿರುವ ಇಂಥ ಜನರ ಮೇಲೆ ಕ್ರಮಕೈಗೊಳ್ಳಲು ಸರಕಾರ ವಿಫಲವಾಗಿದೆ. ಇಂಥ ಪ್ರಚೋದಾತ್ಮಕ ಕೃತಿಯನ್ನು ಮಾಡುತ್ತೇವೆಂದು ಈ ಜನರೆಲ್ಲ ಬಹಿರಂಗವಾಗಿ ಹೇಳಿದ್ದರೂ ಕೂಡ ಸರಕಾರ ಯಾವುದೇ ರೀತಿಯ ಎಚ್ಚರಿಕೆಯ ಕ್ರಮ ಕೈಗೊಳ್ಳದಿರುವುದು ನಿಜವಾಗಿಯೂ ಆಶ್ಚರ್ಯ ಸಂಗತಿಯಾಗಿದೆ. ಮತ್ತು ಇಂಥ ಸಂದಿಗ್ದ ಪರಿಸ್ಥಿತಿಯನ್ನೆದುರಿಸುವಲ್ಲಿ ಸರಕಾರ ಸಂಪೂರ್ಣ ವಿಫಲಗೊಂಡಿದೆಂಬುದನ್ನು ಇದು ತೋರಿಸಿಕೊಟ್ಟಿದೆ.

ಪ್ರತಿಗಾಮಿ ಶಕ್ತಿಗಳ ಈ ಕುತಂತ್ರ ನೋಡಿ, ಯಾವ ಧರ್ಮದವರೆಂಬುದನ್ನು ಪರಿಗಣಿಸದೆ ಪಂಜಾಬ್ ಜನತೆಯ ಐಕ್ಯತೆಯನ್ನು ರಕ್ಷಿಸಬೇಕೆಂದೂ, ರಾಜ್ಯದಲ್ಲಿ ಜಾತಿಯ ಶಾಂತಿಯನ್ನು ಕದಡುತ್ತಿರುವ ತೀವ್ರಗಾಮಿ ಶಕ್ತಿಗಳನ್ನೆಲ್ಲ ಪ್ರತ್ಯೇಕಗೊಳಿಸಬೇಕೆಂದು ಪಂಜಾಬಿನ ಜನತೆಗೂ, ವಿಶೇಷವಾಗಿ ರಾಜಕೀಯ ಪಕ್ಷಗಳಿಗೂ, ಪಾಲಿಟ್ ಬ್ಯೂರೋ ವಿನಂತಿಸುತ್ತದೆ. ಇಂಥ ಕಿಡಿಗೇಡಿಗಳಿಗೆ ಯಾವುದೇ ರೀತಿಯ ಸಂರಕ್ಷಣೆ ಕೊಡಬಾರದೆಂದೂ ಎಲ್ಲ ರಾಜಕೀಯ ಪಕ್ಷಗಳಿಗೆ ವಿನಂತಿ ಮಾಡಿಕೊಳ್ಳುತ್ತದೆ.

ಜಾತೀಯ ಸೌಹಾರ್ದತೆಯನ್ನು ಕದಡಲು ತೀವ್ರ ಪ್ರಯತ್ನ ಮಾಡುತ್ತಿರುವ ಮತೀಯ ಶಕ್ತಿಗಳ ವಿರುದ್ಧ ಐಕ್ಯತೆಯಿಂದ ಹೋರಾಡಬೇಕೆಂದು ಜನತೆಗೆ ಪಿ.ಬಿ. ಕರೆ ಕೊಡುತ್ತದೆ.

[ಅಮೃತಸರ ಘಟನೆಯ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಆಜ್ಞೆಯೊಂದನ್ನು ಹೊರಡಿಸಿ ದಲ್‌ಖಾಲ್ಸಾ ಸಂಸ್ಥೆಯ ಚಟುವಟಿಕೆಯನ್ನು ನಿಷೇಧಿಸಿದೆ.]

ಸಿ.ಪಿ.ಐ. ಮತ್ತು ಸಿ.ಪಿ.ಐ.(ಎಂ) "ಜಂಟೀ ಸಮಾವೇಶ"

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಭಾರತ ಕಮ್ಯುನಿಸ್ಟ್ ಪಕ್ಷಗಳು ಜತೆಯಾಗಿ ಕರ್ನಾಟಕ ರಾಜ್ಯದಲ್ಲಿ ರಾಜ್ಯ ಮಟ್ಟದ ಜಂಟೀ ಸಮಾವೇಶ ನಡೆಸಿ, ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ಸಂಯುಕ್ತ ಚಳುವಳಿಗಳನ್ನು ನಡೆಸುವುದರ ಮೂಲಕ ರಾಜ್ಯದಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸಲು ಶ್ರಮಿಸಬೇಕೆಂದು ಬಹಳಷ್ಟು ದಿನಗಳ ಹಿಂದೆಯೇ ತೀರ್ಮಾನಿಸಲಾಗಿತ್ತು. ಜನತೆಯನ್ನು ಬಾಧಿಸುತ್ತಿರುವ ಸಮಸ್ಯೆಗಳ ಬಗ್ಗೆ ಹೋರಾಡುವುದು ಮತ್ತು ಸರ್ವಾಧಿಕಾರ ಶಕ್ತಿಯ ಮುನ್ನಡೆಯನ್ನು ಜನತೆಯ ವಿಶಾಲ ತಳಹದಿಯ ಪ್ರತಿರೋಧದೊಂದಿಗೆ ತಡೆಹಿಡಿಯುವುದು ಯಶಸ್ವಿಯಾಗಬೇಕಾದರೆ ಎಡ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯು ಅತ್ಯಂತ ಅವಶ್ಯವಿದೆ.

ಕರ್ನಾಟಕ ರಾಜ್ಯದಲ್ಲಿ ರಾಜಕೀಯ ಪರಿಸ್ಥಿತಿಯು ಎಡ ಪಕ್ಷಗಳು ಸಮೀಪ ಬರುವುದರ ಮೂಲಕ ಎಡ ಪ್ರಜಾಪ್ರಭುತ್ವ ಶಕ್ತಿಗಳ ಒಗ್ಗಟ್ಟನ್ನು ಬೆಳೆಸಲು ಪ್ರಯತ್ನಿಸುವುದಕ್ಕೆ ಹಿಂದೆಂದಿಗಿಂತಲೂ ಅನುಕೂಲವಾಗಿದೆ. ರಾಜ್ಯದಲ್ಲಿ ಅಧಿಕಾರದಲ್ಲಿರುವ ಗುಂಡೂರಾಯರ ಕಾಂಗ್ರೆ ಸರಕಾರದ ಜನವಿರೋಧಿ ನೀತಿಗಳಿಂದ ಮತ್ತು ದಮನಕಾರಿ ಕ್ರಮಗಳಿಂದ ಜನತೆಯಲ್ಲಿ ಕಾಂಗ್ರೆ ವಿರೋಧ ಮನೋಭಾವನೆಯು ದಿನೇ ದಿನೇ ಹೆಚ್ಚುತ್ತಿದೆ. ಆದರೆ ರಾಜ್ಯದಲ್ಲಿರುವ ಪ್ರಮುಖ ವಿರೋಧಿ ಪಕ್ಷಗಳೆನಿಸಿರುವ ಆಳುವ ವರ್ಗಗಳಿಗೆ ಸೇರಿದ ರಾಜಕೀಯ ಪಕ್ಷಗಳಲ್ಲಿರುವ ಗೊಂದಲ, ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡುವ ಬಗ್ಗೆ ಕಾಳಜಿ ಇಲ್ಲದಿರುವುದು, ಒಗ್ಗಟ್ಟಾಗುವ ಹೆಸರಿನಲ್ಲಿ ನಡೆಸುವ ಕಣ್ಣಾಮುಚ್ಚಾಲೆಯ ಆಟ, ಇವೆಲ್ಲಾ ಜನತೆಗೆ ಈ ಪ್ರಮುಖ ವಿರೋಧ ಪಕ್ಷಗಳ ಬಗ್ಗೆ ಉತ್ತಮ ಅಭಿಪ್ರಾಯ ಬರುವಂತೆ ಮಾಡುವುದಕ್ಕೆ ಸಹಾಯಕವಾಗುತ್ತಿಲ್ಲ. ಬದಲು ಜನತೆಗೆ ಒಂದು ರೀತಿಯ ಜಿಗುಪ್ಸೆ ಬರುವಂತೆ ಮಾಡುತ್ತಿವೆ.

ಒಂದೆಡೆ ಕಾಂಗ್ರೆ ಸರಕಾರದ ಜನವಿರೋಧಿ ಮತ್ತು ದಮನಕಾರಿ ನೀತಿಗಳಿಂದ ಜನ ಕಂಗೆಟ್ಟಿದೆ. ಮತ್ತೊಂದೆಡೆ ರಾಜ್ಯದಲ್ಲಿ ಕಾನೂನು ವ್ಯವಸ್ಥೆಯು ಕುಸಿಯುತ್ತಿದ್ದು ಜನತೆಯ ಜೀವ ಮತ್ತು ಸ್ವತ್ತುಗಳಿಗೆ ಭದ್ರತೆ ಇಲ್ಲವಾಗುತ್ತಿದೆ. ಕೋಮುವಾದಿ ಮತ್ತು ಛಿದ್ರಕಾರಿ ಶಕ್ತಿಗಳು ರಾಜ್ಯದ ಬೇರೆ ಬೇರೆಡೆಗಳಲ್ಲಿ ಘರ್ಷಣೆ, ಗೊಂದಲಗಳನ್ನುಂಟುಮಾಡುತ್ತಿವೆ. ಗ್ರಾಮೀಣ ಪ್ರದೇಶದ ಜನತೆ, ಕಾರ್ಮಿಕ ವರ್ಗ, ವಿದ್ಯಾರ್ಥಿ–ಯುವಜನತೆ ಮತ್ತು ಮಹಿಳೆಯರು, ದಲಿತರು ಮತ್ತು ಎಲ್ಲಾ ಜನ ಸಾಮಾನ್ಯರನ್ನು ತೀವ್ರವಾಗಿ ಭಾದಿಸುತ್ತಿರುವ ಸಮಸ್ಯೆಗಳಿಗೆದುರಾಗಿ, ಅವುಗಳ ಪರಿಹಾರಕ್ಕಾಗಿ ಹೋರಾಡುವುದು ಎಡ ಪಕ್ಷಗಳು ಮುತುವರ್ಜಿ ವಹಿಸಿದರೇನೇ ಸಾಧ್ಯ. ಈ ರೀತಿಯ ಕಾರ್ಯಕ್ರಮ ಹಾಕಿಕೊಳ್ಳುವುದರ ಮೂಲಕ ರಾಜ್ಯದಲ್ಲಿ ಎಡ ಪ್ರಜಾಪ್ರಭುತ್ವಗಳನ್ನು ಒಗ್ಗೂಡಿಸುವುದಕ್ಕಾಗಿ ಶ್ರಮಿಸುವ ದೃಷ್ಟಿಯಿಂದ ಸಿ.ಪಿ.ಐ. ಮತ್ತು ಸಿ.ಪಿ.ಐ. (ಎಂ) ಪಕ್ಷಗಳು ಜೂನ್ ಹನ್ನೊಂದರಂದು ಒಂದು ದಿನದ ರಾಜ್ಯ ಮಟ್ಟದ ಸಮಾವೇಶ ನಡೆಸಲು ತೀರ್ಮಾನಿಸಿವೆ. ಸಿ.ಪಿ.ಐ.(ಎಂ) ರಾಜ್ಯ ಸಮಿತಿಯು ಮೇ ತಿಂಗಳು 27 ಮತ್ತು 28 ರಂದು ಸಭೆ ಸೇರಿ ಸಮಾವೇಶದ ರೂಪರೇಷೆ, ಹೋರಾಟದ ಕಾರ್ಯಕ್ರಮ ಮುಂತಾದುವುಗಳ ಬಗ್ಗೆ ವಿಮರ್ಶೆ ನಡೆಸಿ, ಅದನ್ನು ಯಶಸ್ವಿಗೊಳಿಸಲು ಶ್ರಮಿಸಲಿದೆ. ರಾಜ್ಯದ ರಾಜಕೀಯಕ್ಕೆ ಎಡ ಮತ್ತು ಪ್ರಗತಿಶೀಲ ತಿರುವು ಕೊಡುವತ್ತ ಸಮಾವೇಶವನ್ನು ಸಂಘಟಿಸಬೇಕಾಗಿದೆ.

ರಾಜ್ಯದಾದ್ಯಂತ ಸಂಭ್ರಮದ ಮೇ ದಿನಾಚರಣೆ

ಅಂತರರಾಷ್ಟ್ರೀಯ ಐಕ್ಯತಾದಿನವಾದ ಮೇ ದಿನಾಚರಣೆಯನ್ನು ರಾಜ್ಯದಾದ್ಯಂತ ಅನೇಕ ಸ್ಥಳಗಳಲ್ಲಿ ಸಂಭ್ರಮದಿಂದ ಆಚರಿಸಿರುವ ವರದಿ ಬಂದಿದೆ. ನಮಗೆ ತಲುಪಿರುವ ವರದಿ ಇಂತಿದೆ :

ಬೆಂಗಳೂರು :

ನಾಡಿನ ರಾಜ್ಯಧಾನಿ ಬೆಂಗಳೂರಿನಲ್ಲಿ ಮೇ ಒಂದರಂದು ಸಿ.ಐ.ಟಿ.ಯು., ಎ. ಐ. ಟಿ. ಯು. ಸಿ. ಮತ್ತು ಎಚ್. ಎಂ. ಎಸ್.ಗಳ ಜಂಟಿ ನೇತೃತ್ವದಲ್ಲಿ ಮೇ ದಿನ ಆಚರಿಸಲಾಯಿತು.

ನಗರದ ಚಿಕ್ಕಲಾಲ್‌ಬಾಗ್‌ನ್ನು ಬಹಿರಂಗ ಸಭೆಗೋಸ್ಕರ ಕೆಂಬಾವುಟಗಳಿಂದ ಸಿಂಗರಿಸಲಾಗಿತ್ತು.

ನಗರದ ಬೇರೆ ಬೇರೆ ಕಡೆಗಳಿಂದ ಸಿ. ಐ. ಟಿ. ಯು. ನೇತೃತ್ವದಲ್ಲಿ ಕಾರ್ಮಿಕರು ಮೆರವಣಿಗೆಯಲ್ಲಿ ಸಭೆಗೆ ಬಂದಿದ್ದರು.

ಸಭೆಯನ್ನುದ್ದೇಶಿಸಿ ಸಿ.ಐ.ಟಿ.ಯು. ರಾಜ್ಯ ಸಮಿತಿಯ ಅಧ್ಯಕ್ಷರಾದ ಕಾಂ| ಸೂರ್ಯನಾರಾಯಣರಾವ್, ಎ. ಐ. ಟಿ. ಯು. ಸಿ. ನಾಯಕರಾದ ಕಾಂ| ಎಂ. ಸಿ. ನರಸಿಂಹನ್, ಮತ್ತು ಕಾಂ|ಬಾಬು ಮ್ಯಾಥ್ಯು, ಮತ್ತು ಎಚ್.ಎಂ.ಎಸ್.ನ ಶ್ರೀಪತಿಯವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಐತಿಹಾಸಿಕ ಮೇ ದಿನದ ಮಹತ್ವವನ್ನು ಪ್ರಸ್ತಾಪಿಸಿದ ಕಾಂ| ಸೂರಿಯವರು, ದೇಶದಲ್ಲಿ ಸರ್ವಾಧಿಕಾರಿ ಶಕ್ತಿಗಳು ಪ್ರಬಲಿಸುತ್ತಿರುವುದರ ಕುರಿತು ಕಾರ್ಮಿಕವರ್ಗಕ್ಕೆ ಎಚ್ಚರಿಕೆ ನೀಡಿದರು. ಇಂದು ಕಾರ್ಮಿಕರು ಕೇವಲ ತಮ್ಮ ಆರ್ಥಿಕ ಬೇಡಿಕೆಗಳಿಗೋಸ್ಕರ ಮಾತ್ರ ಹೆಚ್ಚು ಆಸಕ್ತಿವಹಿಸುತ್ತಿರುವ ಬಗ್ಗೆ ವಿಷಾದಿಸಿದ ಕಾಂ| ಸೂರಿಯವರು ಶೋಷಣಾರಹಿತ ಸಮಾಜ ನಿರ್ಮಾಣದ ಮುಂಚೂಣಿಯಲ್ಲಿರಬೇಕಾದದ್ದು ಕಾರ್ಮಿಕವರ್ಗದ ಚಾರಿತ್ರಿಕ ಕರ್ತವ್ಯವಾಗಿದೆ. ಈ ಕರ್ತವ್ಯ ನಿರ್ವಹಿಸಲು ಮುಂದೆ ಬರಬೇಕೆಂದು ಅವರು ಕರೆ ನೀಡಿದರು.

ಸಾಮ್ರಾಜ್ಯಶಾಹಿ ರಾಷ್ಟ್ರಗಳ ಯುದ್ಧ ಪಿಪಾಸೆಯ ಕುರಿತು ಪ್ರಸ್ತಾಪಿಸಿದ ಕಾಂ| ಸೂರಿಯವರು, ವಿಶ್ವಕಾರ್ಮಿಕ ವರ್ಗವು ಯುದ್ಧ ಅಪಾಯದ ವಿರುದ್ಧ ಎಚ್ಚೆತ್ತು ಸಮಾಜವಾದಿ ಬಣದ ಬೆಂಗಾವಲಾಗಿ ನಿಲ್ಲಬೇಕಿದೆ ಎಂದರು.

ಕಾಂ| ನರಸಿಂಹನ್ ಮತ್ತು ಕಾಂ| ಬಾಬು ಅವರು ಮಾತನಾಡುತ್ತಾ, ಕಾಂಗ್ರೆಸ್ ಸರಕಾರದ ದಿವಾಳಿಖೋರ ಆರ್ಥಿಕನೀತಿಯಿಂದಾಗಿ ಬೆಲೆ ಏರಿಕೆ, ಹಣದುಬ್ಬರ ಹೆಚ್ಚಿದೆ ಎಂದರು. ಅವರು ಮುಂದುವರಿದು ದೇಶದ ಘನತೆ, ಸಾರ್ವಭೌಮತ್ವಕ್ಕೆ ಧಕ್ಕೆ ತರುವ ಷರತ್ತುಗಳೊಂದಿಗೆ ಐ. ಎಂ. ಎಫ್. ನಿಂದ ಸಾವಿರಾರು ಕೋಟಿ ರೂ ಸಾಲ ಪಡೆದದ್ದು ನಾಚಿಕೆಗೇಡು ಎಂದರು.

ಸಭೆಯ ಕೊನೆಯಲ್ಲಿ ಸಮುದಾಯ ತಂಡದವರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಆರಂಭದಲ್ಲಿ ಸಿ. ಐ. ಟಿ. ಯು. ಬೆಂಗಳೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ| ಅನಂತರಾಂ ಸ್ವಾಗತಿಸಿದರು.

ಮೈಸೂರು :

ಧಾರಾಕಾರವಾಗಿ ಸುರಿದ ಮಳೆಯ ನಡುವೆಯೂ ಮೈಸೂರಿನಲ್ಲಿ ಕಾರ್ಮಿಕರು ಅಮಿತೋತ್ಸವದಲ್ಲಿ ಮೇ ದಿನಾಚರಣೆಯನ್ನು ಆಚರಿಸಿದರು. ಜಡಿಮಳೆಯಲ್ಲೆಯೇ ಕಾರ್ಮಿಕರು ಮೆರವಣಿಗೆಯಲ್ಲಿ ಬಂದು ಟೌನ್‌ಹಾಲಿನ ಮೈದಾನದಲ್ಲಿ ನಡೆದ ಬಹಿರಂಗಸಭೆಯಲ್ಲಿ ಪಾಲ್ಗೊಂಡರು.

ಸಿ. ಐ. ಟಿ. ಯು. ಮತ್ತು ಎ. ಐ. ಟಿ. ಯು. ಸಿ., ಜಂಟಿಯಾಗಿ ಏರ್ಪಡಿಸಿದ ಮೇ ದಿನಾಚರಣೆಯಲ್ಲಿ ಅಪಾರ ಸಂಖ್ಯೆಯಲ್ಲಿ ಕಾರ್ಮಿಕರು, ಬುದ್ಧಿಜೀವಿಗಳು, ಇರಾನಿಯನ್ ವಿದ್ಯಾರ್ಥಿಗಳೂ ಭಾಗವಹಿಸಿದ್ದರು.

ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಎ. ಐ. ಟಿ. ಯು. ಸಿ. ಯ ಕಾಂ|| ರೆಹಮಾನ್ ವಹಿಸಿದ್ದರು. ಸಿ. ಐ. ಟಿ. ಯು. ಮುಖಂಡರಾದ

(8ನೇ ಪುಟವನ್ನು ನೋಡಿ)

ಬೆಂಗಳೂರು :

ಕೃಷ್ಣರಾಜಪುರ, ವೈಟ್‌ಫೀಲ್ಡ್ ವಿಭಾಗಗಳಲ್ಲಿ ತೀವ್ರ ಹೋರಾಟಗಳು

ಬೆಂಗಳೂರಿನ ಕೃಷ್ಣರಾಜಪುರ, ವೈಟ್ ಫೀಲ್ಡ್ ಕೈಗಾರಿಕಾ ವಲಯುಗಳಲ್ಲಿ ಸಿ.ಐ.ಟಿ.ಯು. ಅತಿ ಬಲಿಷ್ಠವಾಗಿ ಸಂಘಟಿತವಾಗಿದೆ. ವಿವಿಧ ಕಾರ್ಖಾನೆಗಳ ಸಾವಿರಾರು ಕಾರ್ಮಿಕರು ಸಿ.ಐ.ಟಿ.ಯು. ಅಡಿಯಲ್ಲಿ ಸಂಘಟಿತರಾಗಿದ್ದಾರೆ. ಧೀರ್ಘ ಹೋರಾಟದಿಂದ ಅನೇಕ ಸೌಲಭ್ಯ ಪಡೆದಿದ್ದಾರೆ. ಈ ವಿಭಾಗದ ಕಾರ್ಮಿಕರು ಕೇವಲ ತಮ್ಮ ಆರ್ಥಿಕ ಬೇಡಿಕೆಗಳಿಗೋಸ್ಕರ ಮಾತ್ರವಲ್ಲ, ಬೆಲೆ ಏರಿಕೆ, ಸರಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧವೂ ಹೋರಾಟ ಮಾಡಿರುವುದುಂಟು. ಅನೇಕ ಸೌಹಾರ್ಧತಾ ಹೋರಾಟಗಳನ್ನು ಕೈಗೊಂಡಿದ್ದುಂಟು. ವಿವಿಧ ಕಾರ್ಖಾನೆಗಳ ಕಾರ್ಮಿಕ ಹೋರಾಟ, ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟವನ್ನು ಸಮನ್ವಯಗೊಳಿಸಲು ಕೃಷ್ಣರಾಜಪುರ ವಿಭಾಗದಲ್ಲಿ ಸಿ.ಐ.ಟಿ.ಯು. ಕೋ-ಆರ್ಡಿನೇಷನ್ ಸಮಿತಿಯೂ ಅಸ್ತಿತ್ವದಲ್ಲಿದೆ.

ಸಿ. ಐ. ಟಿ. ಯು. ನೇತೃತ್ವದಲ್ಲಿ ಸಂಘಟಿತರಾದ ಕಾರ್ಮಿಕರ ಸ್ಫೂರ್ತಿಯಿಂದ ಅಸಂಘಟಿತ ಕಾರ್ಮಿಕರೂ ದಿನೇ ದಿನೇ ಸಿ.ಐ.ಟಿ.ಯು.ವಿನತ್ತ ಆಕರ್ಷಿತರಾಗುತ್ತಿದ್ದಾರೆ. ಸಂಘಟಿತರಾಗುತ್ತಿದ್ದಾರೆ.

ಏನಾದರೂ ಮಾಡಿ ಸಿ.ಐ.ಟಿ.ಯು.ವನ್ನು ಸೆದೆಬಡೆಯಲು ಮಾಲೀಕರುಗಳು ಅವಿರತ ಯತ್ನ ನಡೆಸುತ್ತಲೇ ಇದ್ದಾರೆ. ಇತ್ತೀಚೆಗೆ ಸಂಘಟಿತರಾಗುತ್ತಿರುವ ಕಾರ್ಖಾನೆಗಳಲ್ಲಂತೂ ಮಾಲೀಕರು ಸಂಘಟನೆಯ ಉಚ್ಚಾಟನೆ ಮಾಡಲು ಹೆಣಗುತ್ತಿದ್ದಾರೆ. ಹೀಗಾಗಿ ಈ ವಿಭಾಗದಲ್ಲಿ ಇತ್ತೀಚೆಗೆ ಸಿ. ಐ. ಟಿ. ಯು.ಗೆ ಸೇರ್ಪಡೆಯಾಗಿರುವ ಕಾರ್ಮಿಕರು ತಮ್ಮ ತಮ್ಮ ಮಾಲೀಕರ ದೌರ್ಜನ್ಯಕ್ಕೆದುರಾಗಿ ತೀವ್ರ ಹೋರಾಟ ನಡೆಸುತ್ತಿದ್ದಾರೆ. ಇಲ್ಲಿ ಕೆಲವು ಹೋರಾಟಗಳ ವಿವರವನ್ನು ಕೊಡುತ್ತಲಿದ್ದೇವೆ.

ರಾವ್ ಇನ್ಸುಲೇಟಿಂಗ್ ಕೆಂಪನಿಯ ಕಾರ್ಮಿಕರ ಹೋರಾಟ :

ವೈಟ್ ಫೀಲ್ಡ್ ವಿಭಾಗದಲ್ಲಿರುವ, ಕೆಲವು ವಿದ್ಯುತ್ ಉಪಕರಣಗಳನ್ನು ತಯಾರಿಸುತ್ತಿರುವ ರಾವ್ ಇನ್ಸುಲೇಟಿಂಗ್ ಕಂಪನಿಯಲ್ಲಿ ಸುಮಾರು 270 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಜಿ. ಮೋಹನ್‌ರಾವ್ ಎಂಬ ಮಹಾಶಯ ಈ ಕಾರ್ಖಾನೆಯ ಮಾಲೀಕ. ಕಂಪನಿ ಅಸ್ತಿತ್ವಕ್ಕೆ ಬಂದು ಸುಮಾರು 18 ವರ್ಷಗಳ ಅವಧಿಯಲ್ಲಿ ಯಾವುದೇ ಕಾರ್ಮಿಕ ಸಂಘಟನೆ ಅಸ್ತಿತ್ವದಲ್ಲಿ ಬರಲು ಈ ಮಾಲೀಕ ಅವಕಾಶ ಕೊಟ್ಟದಲ್ಲಿಲ್ಲ. ಕಾರ್ಖಾನೆಯ ಆವರಣದಲ್ಲೇ ಕೆಲವು ನಿವಾಸಗಳನ್ನು ಏರ್ಪಡಿಸಿ, ಕೆಲಸಗಾರರು ಅಲ್ಲೇ ವಾಸಮಾಡುವಂತೆ ಮಾಡಿ 'ಕೂಡುದೊಡ್ಡಿ'ಯನ್ನೇ ನಿರ್ಮಿಸಿದ್ದ. ಸ್ವಂತ ಕೆಲಸಕ್ಕೆ ಹೊರ ಹೋಗಲೂ ಮಾಲೀಕನ ಅಪ್ಪಣೆ ಅಗತ್ಯ. ಓವ್ಹರ್‌ಟೈಮ್ ಕೆಲಸ ಮಾಡಲೇಬೇಕು. ಆಶ್ಚರ್ಯವೆಂದರೆ ಇದುವರೆಗೂ ಪ್ರಾಥಮಿಕ ಸೌಲಭ್ಯ (ಇ.ಎಸ್.ಐ., ಪಿ.ಎಫ್.)ಗಳ ಮುಖವನ್ನೂ ಈ ಕಾರ್ಮಿಕರು ಕಂಡಿಲ್ಲ. ರಜಾ ಸೌಲಭ್ಯಗಳಿಲ್ಲ. ಸುರಕ್ಷತಾ ಕ್ರಮಗಳಿಲ್ಲ. ಈ ಕಾರಣ ಅಂಗವಿಕಲರಾದವರೆಷ್ಟೋ ಬಡಪಾಯಿಗಳು ಇಲ್ಲಿದ್ದಾರೆ.

ಕೊನೆಗೂ ಈ ರಾವ್ ಮಹಾಶಯನ ವ್ಯಸಾಹತುವಿನಲ್ಲೂ ಬಿರುಕು (18 ವರ್ಷಗಳ ನಂತರ) ಕಂಡು ಬಂದಿತು. ಕಾರ್ಮಿಕರು ಸಮರಶೀಲ ಕಾರ್ಮಿಕ ಸಂಘಟನೆಯಾದ ಸಿ.ಐ.ಟಿ.ಯು.ವನ್ನು ಸೇರಿದರು. ಅನ್ಯಾಯ, ದೌರ್ಜನ್ಯ, ದಬ್ಬಾಳಿಕೆಗಳ ವಿರುದ್ಧ ಪ್ರತಿಭಟನೆಯೂ ಮೊಳಕೆಯೊಡೆಯಿತು. ರಾವ್‌ನ ಕಣ್ಣು ಕೆಂಪಾಯಿತು. ಸರಿ, ಎಲ್ಲಾ ಮಾಲೀಕರ ಕ್ರಮವನ್ನೇ ರಾವ್ ಅನುಸರಿಸಿದ.

27-4-82 ರಂದು ಸಾಯಂಕಾಲ ಸುಮಾರು 50 ಗೂಂಡಾಗಳು 3 ಕಾರು ಮತ್ತು ಒಂದು ಬಾದಲ್ ಟ್ಯಾಕ್ಸಿ ಮುಂತಾದ ವಾಹನಗಳಲ್ಲಿ ಶಸ್ತ್ರಸನ್ನದ್ಧರಾಗಿ ಕಾರ್ಖಾನೆ ಆವರಣಕ್ಕೆ ಬಂದು ಕಾರ್ಮಿಕರನ್ನು ಮನಬಂದಂತೆ ಥಳಿಸಿದ್ದಾರೆ. ಗೂಂಡಾಗಳ ಈ ಸುವ್ಯವಸ್ಥಿತ ಕಾರ್ಯಾಚರಣೆ ನಡೆಯುವಾಗ ಸ್ಥಳದಲ್ಲಿದ್ದ ಪೋಲೀಸ್ ಕಾನ್‌ಸ್ಟೇಬಲ್‌ನೊಬ್ಬ ತಮ್ಮ ಇಲಾಖೆಯ ಮಹಾನ್ ಪರಂಪರೆಯನ್ನು ಮುಂದುವರಿಸಲೇನೋ ಎಂಬಂತೆ ಗೂಂಡಾಗಳನ್ನು ತಡೆಯದೇ ಕೈಗೆ ಸಿಕ್ಕ ನಾಲ್ಕಾರು ಕಾರ್ಮಿಕರಿಗೇ ಬಾರಿಸಿದ. ಕೆಲವು ಪೋಲಿಸರು ತಮ್ಮ ದೊಣ್ಣೆಗಳನ್ನು ಗೂಂಡಾಗಳಿಗೆ ನೀಡಿದ್ದಾಗಿ ತಿಳಿದು ಬಂದಿದೆ. ನಿಜಾಮುದ್ದೀನನ ನೇತೃತ್ವದ ಪೋಲಿಸರಿಂದ ಇನ್ನೇನು ತಾನೆ ನಾವು ನಿರೀಕ್ಷಿಸಲು ಸಾಧ್ಯ ?

ಈ ದಾಳಿಯಲ್ಲಿ ರಾಮ್‌ನೋಹನ್ ರಾವ್, ಲಕ್ಷ್ಮಣ, ವೆಂಕಟರತ್ನಂ ಮುಂತಾದ ಕಾರ್ಮಿಕರಿಗೆ ವಿಪರೀತ ಗಾಯಗಳಾಗಿವೆ. ಈ ರಸ್ತೆಯಲ್ಲಿ ಸಾಗುತ್ತಿದ್ದ ಬ್ರುಕ್‌ಬಾಂಡ್ ಫ್ಯಾಕ್ಟರಿಯ ಕಾರ್ಮಿಕ ಅರುಲ್ ಎಂಬಾತನನ್ನೂ ಗೂಂಡಾಗಳು ಥಳಿಸಿದ್ದ ಕಾರಣ ಆತ ಬೌರಿಂಗ್ ಆಸ್ಪತ್ರೆಯಲ್ಲಿ ದಾಖಲಾಗಿದ್ದಾನೆ.

ಮರುದಿನ 28-4-82 ರಂದು ಗಾಯದ ಮೇಲೆ ಉಪ್ಪು ಹಾಕಿದಂತೆ ಮಾಲೀಕ ರಾವ್ ಲಾಕ್ ಔಟ್ ಘೋಷಿಸಿದ್ದಾನೆ. ತಮ್ಮದೂ ಒಂದು ಅಕ್ಕೀಕಾಳು ಎಂಬಂತೆ ಪೋಲಿಸರು ಈ ಪ್ರದೇಶದಲ್ಲಿ 144 ಕಲಂನ್ನು ಹೇರಿದ್ದಾರೆ.

ಈಗಾಗಲೇ ಸೌಹಾರ್ಧತಾ ಕಾರ್ಯಾಚರಣೆಯ ಅಂಗವಾಗಿ ಒಂದು ಬಹಿರಂಗ ಸಭೆ ನಡೆದಿದೆ. ಸಭೆಯನ್ನುದ್ದೇಶಿಸಿ ಕಾಂ। ಸೂರ್ಯನಾರಾಯಣರಾವ್, ಅನಂತರಾಮ್ ಮತ್ತು ಕಾಂ। ವಿನ್ಸಂಟ್ ಮಾತನಾಡಿ ಗೂಂಡಾಗಿರಿಯ ವಿರುದ್ಧ ಎಚ್ಚರಿಕೆ ನೀಡಿದ್ದಾರೆ. ಈ ಹೋರಾಟದ ಕುರಿತು ಪತ್ರಿಕಾಗೋಷ್ಠಿಯೊಂದು ನಡೆದಿದೆ. ರಾವ್‌ನ ಲಾಭದಾಸೆಗೆ ಬಲಿಯಾಗಿ ಅಂಗಾಂಗ ಕಳೆದುಕೊಂಡಿರುವ ಕಾರ್ಮಿಕರು ಪತ್ರಿಕಾಗೋಷ್ಠಿಗೆ ಆಗಮಿಸಿದ್ದರು. ತಮ್ಮ ಕಷ್ಟಗಳನ್ನು ಪತ್ರಕರ್ತರೆದುರು ವಿವರಿಸಿದರು.

ಇಷ್ಟಕ್ಕೆ ಸುಮ್ಮನಾಗದ ಮಿ. ರಾವ್ ಇಂಟರ್‌ನ ಪೋಟಿ ಸಂಘವನ್ನು ಕಟ್ಟಿದ್ದಾನೆ. ಹೋರಾಟ ತೀವ್ರವಾಗುತ್ತಿದೆ. ಬೇಗ ಪಾಠ ಕಲಿತಷ್ಟೂ ರಾವ್‌ನಿಗೇ ಒಳ್ಳೇಯದು.

ಕೆ. ಆರ್. ಪುರಂ ಸಿ. ಐ. ಟಿ.ಯು. ಕೋ-ಆರ್ಡಿನೇಷನ್ ಸಮಿತಿಯ ಸಂಚಾಲಕ ಕಾಂ। ಕುಂಜಪ್ಪ ಹೇಳಿಕೆಯೊಂದನ್ನು ಹೊರಡಿಸಿ ದಬ್ಬಾಳಿಕೆಯ ವಿರುದ್ಧ ತೀವ್ರ ಹೋರಾಟ ನಡೆಸಿರುವ ಕಾರ್ಮಿಕರನ್ನು ಅಭಿನಂದಿಸಿದ್ದಾರೆ.

ಆಂಧ್ರ ಮತ್ತು ಸದರನ್ ಸ್ಟೀಲ್ ಕಾರ್ಮಿಕರ ಹೋರಾಟ :

'ಆಂಧ್ರ ಸ್ಟೀಲ್ ಕಾರ್ಪೋರೇಷನ್ ಲಿಮಿಟೆಡ್' ಎಂಬ ಕಾರ್ಖಾನೆ ವೈಟ್ ಫೀಲ್ಡ್ ರಸ್ತೆಯಲ್ಲಿದೆ. ಇದರ ಪಕ್ಕದಲ್ಲೇ 'ಸದರನ್ ಸ್ಟೀಲ್ಸ್ ಮೆಟ್ ಆ್ಯಂಡ್ ಅಲಾಯ್ಸ್ ಲಿಮಿಟೆಡ್' ಎಂಬ ಮತ್ತೊಂದು ಕಾರ್ಖಾನೆ ಇದೆ. ಎರಡೂ ಕಾರ್ಖಾನೆಗಳ ಮಾಲೀಕ ಒಬ್ಬನೇ. ಹೆಸರು ಮಿ. ಮಿತ್ತಲ್ ಎಂದು. ಈತ ತನ್ನ ಅನುಕೂಲಕ್ಕೋಸ್ಕರ ಈ ಎರಡು ಕಾರ್ಖಾನೆಗಳನ್ನು ಬೇರೆ ಬೇರೆ ಹೆಸರಿನಿಂದ ನಡೆಸುತ್ತಿದ್ದಾನೆ. ಈ ಎರಡೂ ಕಾರ್ಖಾನೆಗಳಲ್ಲಿ ಸುಮಾರು 1140 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. (ಮಾಲೀಕನ ಹೇಳಿಕೆಯ ಪ್ರಕಾರ). ಇವರಲ್ಲಿ ಕೇವಲ 300 ಜನರು ಮಾತ್ರ ಕಾಯಂ ಕೆಲಸಗಾರರು. ಉಳಿದವರು ಅಪ್ರೆಂಟಿಸ್, ಟ್ರೈನೀ, ಕ್ಯಾಸುಯಲ್, ಪ್ರೊಬೇಷನರಿ, ಕಾಂಟ್ರ್ಯಾಕ್ಟ್ ಲೇಬರ್ (ಬೇರೇನೂಸೌಲಭ್ಯ ಕಾರ್ಮಿಕರಿಗಿಲ್ಲವಾದರು- ಈ ವಿಧವಿಧವಾದ ವರ್ಣರಂಜಿತ ಹಣೆಪಟ್ಟಿಗಳಿಗೆ ಕೊರತೆ ಇಲ್ಲ) ಮುಂತಾದ ಹೆಸರಿನಲ್ಲಿ ಕಳೆದ 7-8 ವರ್ಷಗಳಿಂದ ದುಡಿಯುತ್ತಿದ್ದಾರೆ. ಯಥಾಪ್ರಕಾರ ಯಾವುದೇ ಸೌಲಭ್ಯಗಳೂ ಇಲ್ಲ. ತಾವುಗಳು ಈ ಕಾರ್ಖಾನೆಯಲ್ಲಿ ದುಡಿಯುತ್ತಿರುವುದರ ಕುರಿತು ಯಾವುದೇ ದಾಖಲೆಯೂ ಈ ಕಾರ್ಮಿಕರ ಬಳಿ ಇಲ್ಲ. ಚಕಾರವೆತ್ತಿದರೆ ಅವರಿಗೆ ನಿರ್ಧಾಕ್ಷಿಣ್ಯವಾಗಿ ಗೇಟ್ ಪಾಸ್.

ಹೆಚ್ಚುವರಿ ಸಂಬಳವಿಲ್ಲದೇ ಓ.ಟಿ.ಯನ್ನು ಕಡ್ಡಾಯವಾಗಿ ಪ್ರತಿಯೊಬ್ಬನೂ ಮಾಡಲೇ ಬೇಕು. 10 ಘಂಟೆ...12 ಘಂಟೆ...16 ಘಂಟೆ ಈ ರೀತಿ. ಕಾರ್ಮಿಕನ ದುಡಿತದ ಅವಧಿ ನಿಗದಿಯಾಗುವದು ಮಾಲೀಕನ ಖುಷಿ ಬಂದ ಹಾಗೆ. ಈ ಎಲ್ಲಾ ಅವ್ಯವಸ್ಥೆಗಳ ವಿರುದ್ಧ ಕಾರ್ಮಿಕ ಇಲಾಖೆಗೆ ಅನೇಕ ಸಲ ದೂರು ಕೊಟ್ಟಿದ್ದರೂ, ಅದು ತನ್ನ ಕುಂಭಕರ್ಣ ನಿದ್ರೆಯಿಂದ ಎದ್ದೇ ಇಲ್ಲ. ಅಥವಾ ಆ ರೀತಿ ನಟಿಸುತ್ತಿದೆಯೋ ತಿಳಿಯದು.

ಕಳೆದ ಡಿಸೆಂಬರ್‌ನಿಂದ ಈ ಕಾರ್ಮಿಕರು ಸಿ. ಐ. ಟಿ. ಯು. ನೇತೃತ್ವದಲ್ಲಿ ಆಂಧ್ರ ಆ್ಯಂಡ್ ಸದರನ್ ಸ್ಟೀಲ್ಸ್ ಕಾರ್ಮಿಕ ಸಂಘವನ್ನು ರಚಿಸಿಕೊಂಡಿದ್ದಾರೆ. ಕಾನೂನು ಪ್ರಕಾರ ರಚಿತವಾದ ಈ ಸಂಘದೊಡನೆ ಸೌಹಾರ್ಧತೆಯಿಂದ ಮಾತುಕತೆ ನಡೆಸುವ ಬದಲು ಮಿ. ಮಿತ್ತಲ್ ಸಂಘವನ್ನು ಪುಡಿಗುಟ್ಟಲು ಹವಣಿಸಿದ್ದಾನೆ. ಯಾವುದೇ ವಿಚಾರಣೆ ಇಲ್ಲದೇ ಸಂಘದ ಸಕ್ರೀಯ ಕಾರ್ಯಕರ್ತರನ್ನು ವಜಾಗೊಳಿಸಿದ್ದಾನೆ. ಸುಮಾರು 128 ಕಾಯಂ ಕೆಲಸಗಾರರಿಗೆ ಅಕ್ರಮ ಲೇ ಆಫ್ ಜಾರಿ ಮಾಡಿದ್ದಾರೆ. ಕಾಂಟ್ರ್ಯಾಕ್ಟ್ ಕೆಲಸಗಾರರಿಂದ ಹೆದರಿಸಿ-ಬೆದರಿಸಿ ಕೆಲಸ ಪಡೆಯುವ ಯತ್ನ ಜೋರಾಯಿತು. ಪ್ರತಿಭಟಿಸಿದವರನ್ನು ಗೂಂಡಾಗಳನ್ನು ಕರೆತಂದು ಬಾಯಿಮುಚ್ಚಿಸಲಾಯಿತು. ಅನೇಕ ಕಾರ್ಯಕರ್ತರ ಮೇಲೆ ಸುಳ್ಳು ದೂರುಗಳನ್ನು ಕೊಟ್ಟು ಅವರುಗಳು ಪೋಲಿಸ್‌ಠಾಣೆ-ಜೈಲಿಗೆ ಅಲೆಯುವಂತೆಯೂ ಮಾಡಲಾಯಿತು.

ವಾತಾವರಣ ತಿಳಿಗೊಳಿಸುವ ಸಂಘದ ಎಲ್ಲ ಪ್ರಯತ್ನಗಳೂ ಮಣ್ಣುಗೂಡಿದವು. ಸಂಘ ಕಳಿಸಿದ ಎಲ್ಲ ಪತ್ರಗಳನ್ನೂ ವಾಪಸ್ ಮಾಡಲಾಗಿದೆ. ಈ ಕಾರ್ಮಿಕರೆಲ್ಲರೂ 2-4-82 ರಂದು ಲೇಬರ್ ಕಮೀಷನರ್ ಕಚೇರಿಗೆ ಮೆರವಣಿಗೆಯಲ್ಲಿ ತೆರಳಿ ಸಮಸ್ಯೆಗಳ ಇತ್ಯರ್ಥಕ್ಕೆ ಅಗ್ರಹಪಡಿಸಿ ಮನವಿ 'ಸಲ್ಲಿಸಿದ್ದರು. ಪರಿಸ್ಥಿತಿಯ ಗಂಭೀರತೆಯನ್ನು ಮನಗಂಡ ಲೇಬರ್ ಕಾಮೀಷನರ್ ಮಾತುಕತೆಗೆ ಬರುವಂತೆ ಮಾಲೀಕನನ್ನು ಆಮಂತ್ರಿಸಿದರು. ಮಿ. ಮಿತ್ತಲ್ ಏನು ಉತ್ತರಿಸಿದ್ದಾನೆ ಗೊತ್ತೇ ? "ಕಮ್ಯೂನಿಸ್ಟರ ನೇತೃತ್ವದ ಕಾರ್ಮಿಕ ಸಂಘದೊಡನೆ ನಾವು ಮಾತುಕತೆ ನಡೆಸುವುದಿಲ್ಲ. ಸಂಘವನ್ನು ಮಾನ್ಯ ಮಾಡುವುದು ಸಾಧ್ಯವೇ ಇಲ್ಲ. ಇದು ನಮ್ಮ ನಿಲುವು" ಎಂದು ರಾಜಾರೋಷವಾಗಿ ಲೇಬರ್ ಕಮೀಷನರ್‌ರಿಗೆ ತಿಳಿಸಿದ್ದಾನೆ. (ಮಿ. ಮಿತ್ತಲ್ ಅವರು ಲೇ.ಕ.ರಿಗೆ ಬರೆದ ಪತ್ರದ ನಕಲು ನಮ್ಮಲ್ಲುಂಟು.)

ಕೊನೆಗೆ ಅನಿವಾರ್ಯವಾಗಿ 15-4-82 ರಿಂದ ಕಾರ್ಮಿಕರು ಮುಷ್ಕರಕ್ಕಿಳಿದಿದ್ದಾರೆ: ಮಾಲೀಕರ ಗೂಂಡಾಗಳು, ಅವರ ಬೆಂಬಲಕ್ಕಿರುವ ಪೋಲಿಸರು, ಇವರ ಉಸ್ತುವಾರಿ ವಹಿಸಿರುವ ಭ್ರಷ್ಟ ಸರಕಾರದ ವಿರುದ್ಧ ಕಾರ್ಮಿಕರು ದಿಟ್ಟ ಹೋರಾಟ ನಡೆಸಿದ್ದಾರೆ. ಮಿ.ಮಿತ್ತಲ್ ಮಾತುಕತೆಗೆ ಮುಂದೆ ಬರುವವರೆಗೂ, ಬೇಡಿಕೆಗಳನ್ನು ಈಡೇರಿಸುವವರೆಗೂ ಹೋರಾಟ ನಿಲ್ಲದೆಂದು ಧೃಡ ಸಂಕಲ್ಪ ಮಾಡಿದ್ದಾರೆ.

ಕಾಂಟ್ರ್ಯಾಕ್ಟ್ ಪದ್ಧತಿಯ ವಿರುದ್ಧ ಹೋರಾಟ ನಡೆಸಿರುವ ಕ್ಯಾಪ್‌ಸ್ಟೀಲ್ ಕಾರ್ಮಿಕರು !

ಈ ಕಾರ್ಖಾನೆಯೂ ವೈಟ್ ಫೀಲ್ಡ್ ರಸ್ತೆಯಲ್ಲಿದೆ. ಇಲ್ಲಿ ಸುಮಾರು 450 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ 130 ಮಂದಿ ಮಾತ್ರ ಕಾಯಂ ಕೆಲಸಗಾರರು. ಉಳಿದವರೆಲ್ಲ 'ಕಾಂಟ್ರ್ಯಾಕ್ಟ್ ಲೇಬರ್' ಎಂಬ ಹಣೆ ಪಟ್ಟಿಯನ್ನು ಅಂಟಿಸಿಕೊಂಡು ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ.

ಈ ಕಂಟ್ರ್ಯಾಕ್ಟ್ ಪದ್ಧತಿಯನ್ನು ರದ್ದುಗೊಳಿಸುವಂತೆ ಒತ್ತಾಯಿಸಿ ಕ್ಯಾಪ್‌ಸ್ಟೀಲ್ ಕಾರ್ಮಿಕರು 15-4-82 ರಿಂದ ಅನಿರ್ಧಿಷ್ಠ ಕಾಲದ ಮುಷ್ಕರ ನಡೆಸಿದ್ದಾರೆ. ಮುಷ್ಕರ ಸದೆಬಡಿಯಲು ಮಾಲೀಕ ಯತ್ನಿಸುತ್ತಿದ್ದಾನೆ. ಬೇಡಿಕೆ ಈಡೇರುವವರೆಗೂ ಮುಷ್ಕರ ನಿಲ್ಲದೆಂಬ ತೀರ್ಮಾನಕ್ಕೆ ಬಂದಿದ್ದಾರೆ.

ಟಿಕ್‌ಮಣಿ ಸ್ಟೀಲ್ಸ್ ಕಾರ್ಮಿಕರ ಹೋರಾಟ :

ವೈಟ್‌ಫೀಲ್ಡ್ ರಸ್ತೆಯಲ್ಲಿರುವ ಈ ಕಾರ್ಖಾನೆಯಲ್ಲಿ ಸುಮಾರು 250 ಕಾರ್ಮಿಕರಿದ್ದು ಒಬ್ಬರೂ ಇನ್ನೂವರೆಗೂ ಕಾಯಂಗೊಂಡಿಲ್ಲ. ಇಲ್ಲಿಯೂ 'ಕಾಂಟ್ರ್ಯಾಕ್ಟ್' ಎಂಬ ಹೆಸರಿನಲ್ಲಿ ಕಾರ್ಮಿಕರ ರಕ್ತ ಹೀರುವ ಕೆಲಸ ನಡೆದೇ ಇದೆ. ಕಾರ್ಮಿಕರು ಸಂಘಟಿತರಾಗಿ ಇದನ್ನು ವಿರೋಧಿಸಿದ್ದರಿಂದ ಮಾಲೀಕರು 12-4-82ರಿಂದ ಅಕ್ರಮ ಲೇ-ಆಪ್ ಘೋಷಿಸಿರುತ್ತಾರೆ.

ಈ ಮೇಲ್ಕಾಣಿಸಿದ ಕಾರ್ಖಾನೆಗಳಲ್ಲಿ ಹೋರಾಟ ತೀವ್ರವಾಗಿ ನಡೆಯುತ್ತಿದೆ. ಮಾಲೀಕರು ರಾಜಿಗೆ ಬಂದಿಲ್ಲ. ಕಾರ್ಮಿಕ ಶಕ್ತಿಯ ಸಂಯಮದ ಕಟ್ಟು ಕಡಿದುಬೀಳುವ ಮೊದಲೇ ಸಮುಖ

(7ನೇ ಪುಟ ನೋಡಿ)

ಟ್ರೇಡ್ ಯೂನಿಯನ್ ಚಳುವಳಿಯಲ್ಲಿ ಮಹಿಳೆಯರು ಹೆಚ್ಚು ಆಸಕ್ತಿ ವಹಿಸಬೇಕು

–ವಿಮಲಾ ರಣದಿವೆ

ಮಹಿಳೆಯರೇ ಬಹುಸಂಖ್ಯೆಯಲ್ಲಿರುವ ಬೀಡಿ ಕೈಗಾರಿಕೆಯಲ್ಲಿ ಕಾರ್ಮಿಕರು ತಮ್ಮ ಕೂಲಿ ಹೆಚ್ಚಳ, ಇತರ ಸವಲತ್ತುಗಳು ಮತ್ತು ತಮ್ಮ ಹಕ್ಕುಗಳ ರಕ್ಷಣೆಗಾಗಿ ನಡೆಸುತ್ತಿರುವ ಹೋರಾಟವು ಹೆಚ್ಚು ಪರಿಣಾಮಕಾರಿಯಾಗಬೇಕಾದರೆ, ಮಹಿಳೆಯರು ತಮ್ಮ ಸಂಘಟನೆಗಳಲ್ಲಿ ಮುಂದಾಳತ್ವ ವಹಿಸಿ ಕೆಲಸ ಮಾಡಬೇಕೆಂದು ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಸಂಚಾಲಕಿ ಕಾಮ್ರೇಡ್ ವಿಮಲ ರಣದಿವೆಯವರು ಕರೆನೀಡಿದ್ದಾರೆ. ಏಪ್ರಿಲ್ 24 ಮತ್ತು 25 ರಂದು ಬಂಟ್ವಾಳದಲ್ಲಿ ಜರುಗಿದ ಕರ್ನಾಟಕ ಬೀಡಿ ಕಾರ್ಮಿಕರ ಫೆಡರೇಷನ್ನಿನ 4ನೇ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ. ಅವರು ಭಾಷಣ ಮಾಡುತ್ತಿದ್ದರು.

ದೇಶಾದ್ಯಂತ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನೂ, ದಿಲ್ಲಿ ಮತ್ತಿತರ ನಗರಗಳಲ್ಲಿ ನಡೆಯುತ್ತಿರುವ ಡಕಾಯಿತಿಗಳನ್ನೂ ವಿವರಿಸಿ, ಈ ಭೀಕರ ಅನ್ಯಾಯಗಳ ವಿರುದ್ಧ ಜನರಿಗೆ ರಕ್ಷಣೆ ನೀಡಲು ವಿಫಲವಾದ ಕೇಂದ್ರ ಸರಕಾರವನ್ನು ಉಗ್ರವಾಗಿ ಖಂಡಿಸಿದ ಕಾಮ್ರೇಡ್ ವಿಮಲ ಅವರು ಈ ದೇಶವನ್ನು ಶ್ರೀಮತಿ ಇಂದಿರಾ ಗಾಂಧಿಯವರು ಆಳುತ್ತಿದ್ದಾರೋ, ಡಕಾಯಿತರು ಆಳುತ್ತಿದ್ದಾರೋ ಎಂದು ಸಂಶಯವಾಗುತ್ತಿದೆ ಎಂದರು. ದೇಶದಲ್ಲಿ ಕೋಮು ಗಲಭೆಗಳನ್ನೂ, ಛಿದ್ರಕಾರಿ ಚಟುವಟಿಕೆಗಳನ್ನೂ ಪ್ರಚೋದಿಸಿ ದುಡಿಯುವ ಜನರ ಐಕ್ಯವನ್ನೂ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೂ ಬುಡಮೇಲು ಮಾಡಲು ಅಮೇರಿಕನ್ ಸಾಮ್ರಾಜ್ಯಶಾಹಿಗಳೂ, ಅವರ ಏಜಂಟರೂ, ದೇಶದ ಇತರ ಪ್ರತಿಗಾಮಿ ಶಕ್ತಿಗಳೂ ನಡೆಸುತ್ತಿರುವ ಪಿತೂರಿಗಳ ಕುರಿತು ಕಾರ್ಮಿಕ ವರ್ಗ ಜಾಗೃತವಾಗಿರಬೇಕೆಂದು ಅವರು ಎಚ್ಚರಿಸಿದರು. ಬಂಡವಾಳಶಾಹಿ ಮತ್ತು ಭೂಮಾಲೀಕ ವರ್ಗಗಳ ಪ್ರತಿನಿಧಿಯಾದ ಇಂದಿರಾ ಸರ್ಕಾರವು ಕಾರ್ಮಿಕವರ್ಗದ ಮತ್ತು ಬಡಜನತೆಯ ಹಿತಾಸಕ್ತಿಗಳನ್ನು ರಕ್ಷಿಸಲಾರದೆಂದೂ, ಕಾರ್ಮಿಕರು ವರ್ಗ ಜಾಗೃತಿಯನ್ನು ಬೆಳೆಸಿಕೊಂಡು ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸಬೇಕೆಂದೂ ಅವರು ಕರೆನೀಡಿದರು.

ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ನಿನ ಅಧ್ಯಕ್ಷರಾದ ಕಾಂ| ಎಸ್. ಸೂರ್ಯನಾರಾಯಣ ರಾವ್‌ರವರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನಕ್ಕೆ ಮೊದಲು ಬಂಟ್ವಾಳದ ಹಿರಿಯ ಕಾರ್ಮಿಕ ಮುಂದಾಳು ಕಾಂ| ಬಿ. ಎಚ್. ಬಂಗೇರರು ಧ್ವಜಾರೋಹಣ ಮಾಡಿದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಕಾಂ| ಕೆ. ಮೂಸಬ್ಬನವರು ಸ್ವಾಗತ ಭಾಷಣ ಮಾಡಿದರು.

ಆಗಲಿದ ನಾಯಕರಾದ ಕಾಂ|| ಜ್ಯೋತಿರ್ಮಯ ಬಸು, ಕಾಂ|| ಎ. ಬಾಲಸುಬ್ರಮಣ್ಯಂ, ಕಾಂ|| ಭೂಪೇಶಗುಪ್ತ, ಕಾಂ|| ಅಧಿಕಾರಿ, ದ. ಕ. ಜಿಲ್ಲೆಯ ಕಾರ್ಮಿಕ ಮುಖಂಡರಾಗಿದ್ದ ಕಾಂ|| ಎ ಕೆ. ನಾರಾಯಣ, ಕಾಂ|| ಸೇಸಮ್ಮ ಮತ್ತು ಕಾರ್ಮಿಕ – ರೈತ ಹೋರಾಟಗಳಲ್ಲಿ ಹುತಾತ್ಮರಾದವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಸಿ. ಐ. ಟಿ. ಯು. ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ|| ಸಿ. ನಂಜುಂಡಪ್ಪನವರು ಉದ್ಘಾಟನಾ ಭಾಷಣ ಮಾಡುತ್ತಾ, ದೇಶದ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಯನ್ನೂ ಸರಕಾರದ ಜನ ವಿರೋಧಿ ಧೋರಣೆಗಳನ್ನೂ ವಿವರಿಸಿ, ಬೀಡಿ ಕಾರ್ಮಿಕರು ತಮ್ಮ ಹಕ್ಕುಗಳ ರಕ್ಷಣೆಗಾಗಿ ಸಂಘಟನೆಯನ್ನು ಇನ್ನಷ್ಟು ಬಲಪಡಿಸಿ ತೀವ್ರ ಹೋರಾಟಗಳಿಗೆ ಸಿದ್ಧರಾಗಬೇಕೆಂದು ಕರೆನೀಡಿದರು. ಸಾಮ್ರಾಜ್ಯಶಾಹಿ ಅಮೇರಿಕೆಯ ಯುದ್ಧ ಪಿಪಾಸು ನೀತಿಯಿಂದ ಹೆಚ್ಚುತ್ತಿರುವ ಯುದ್ಧದ ಗಂಡಾಂತರದ ಕುರಿತು ಕಾಂ| ಸಿ.ಎನ್. ಕಾರ್ಮಿಕರ ಗಮನ ಸೆಳೆದರು.

ಫೆಡರೇಷನ್ನಿನ ಪ್ರಧಾನ ಕಾರ್ಯದರ್ಶಿ ಕಾಂ| ಪಿ ರಾಮಚಂದ್ರರಾಯರು ಬೀಡಿ ಕಾರ್ಮಿಕರ ಹೋರಾಟಗಳ ಅನುಭವಗಳನ್ನೂ, ಕಾರ್ಮಿಕರ ಮುಂದಿರುವ ಸಮಸ್ಯೆಗಳನ್ನು ವಿವರಿಸಿದರು.

ಕಾಂ| ಮಹಮದ್ ದಸ್ತಗಿರ್ ಮಂಡಿಸಿದ ವರದಿಯನ್ನು ಸುದೀರ್ಘ ಚರ್ಚೆಯ ನಂತರ ಅಂಗೀಕರಿಸಲಾಯಿತು.

ಸಾವಿರ ಬೀಡಿಗೆ 12 ರೂಪಾಯಿ ಕೂಲಿ ನಿಗದಿಯಾಗಬೇಕು, ಎಲೆ ಎವರೇಜ್ ಇತ್ಯಾದಿ ದಂಡ ವಸೂಲಿ ನಿಲ್ಲಬೇಕು, ಪ್ರಾವಿಡೆಂಟ್ ಫಂಡಿಗೆ ವಸೂಲಾದ ಹಣಕ್ಕೆ ಲೆಕ್ಕ ಪತ್ರ ಕೊಡಬೇಕು, ಇತ್ಯಾದಿ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ನಡೆಸಲು ಸಮ್ಮೇಳನವು ತೀರ್ಮಾನಿಸಿತು. ಬೆಲೆ ಏರಿಕೆಯನ್ನು ತಡೆಗಟ್ಟಲು ಜೀವನಾವಶ್ಯಕ ವಸ್ತುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಕಡಿಮೆ ಬೆಲೆಯಲ್ಲಿ ಒದಗಿಸಬೇಕೆಂದು ಒತ್ತಾಯಿಸುವ, ಮತ್ತು ಅವಶ್ಯ ಸೇವಾ ನಿರ್ವಹಣ ಕಾನೂನನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸುವ, ಮುಂಬಯಿಯಲ್ಲಿ ನಡೆಯುತ್ತಿರುವ ಗಿರಣಿ ಕಾರ್ಮಿಕರ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸುವ ಠರಾವುಗಳನ್ನು ಅಂಗೀಕರಿಸಲಾಯಿತು.

ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ 69 ಮಹಿಳೆಯರನ್ನು ಒಳಗೊಂಡು ಒಟ್ಟು 131 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಕಂಟ್ರಾಕ್ಟ್ ಪದ್ಧತಿ ರದ್ದು ಮಾಡಲು ೨೪ ರಂದು ರಾಜ್ಯಾದ್ಯಂತ ಸತ್ಯಾಗ್ರಹ ನಡೆಸಲು ಬೀಡಿ ಕಾರ್ಮಿಕರಿಗೆ ಕರೆ

ಬೀಡಿ ಕಾರ್ಮಿಕರಿಗೆ ಕಾನೂನು ಪ್ರಕಾರ ಸಲ್ಲತಕ್ಕ ಅಲ್ಪ ಸ್ವಲ್ಪ ಸವಲತ್ತುಗಳನ್ನು ಕೂಡಾ ಕಬಳಿಸಿಕೊಂಡು, ಅವರನ್ನು ದಿನನಿತ್ಯ ಕ್ರೂರವಾಗಿ ಶೋಷಣೆ ಮಾಡುತ್ತಿರುವ ಕಂಟ್ರಾಕ್ಟರರ ಕಪಿ ಮುಷ್ಟಿಯಿಂದ ಬಿಡುಗಡೆ ಹೊಂದುವುದು ಬೀಡಿ ಕಾರ್ಮಿಕರ ತುರ್ತಿನ ಅವಶ್ಯಕತೆಯಾಗಿದೆ ಎಂದು ಬೀಡಿ ಕಾರ್ಮಿಕರ 4ನೇ ರಾಜ್ಯ ಸಮ್ಮೇಳನವು ತೀರ್ಮಾನಿಸಿದೆ. ಎಲೆ ಎವರೇಜಿನ ಹೆಸರಿನಲ್ಲಿ ಕೂಲಿಯಿಂದ ಕಡಿತ ಮಾಡುವುದು, ಬೋನಸ್, ರಜಾ ಸಂಬಳ ಇತ್ಯಾದಿಗಳಲ್ಲಿ ವಂಚನೆ ಮಾಡುವುದು, ಮಹಿಳಾ ಕಾರ್ಮಿಕರ ಬದಲಿಗೆ ಅವರ ಗಂಡಂದಿರ ಹೆಸರುಗಳನ್ನು ದಾಖಲೆಗಳಲ್ಲಿ ಬರೆದು ಹೆರಿಗೆ ಭತ್ತೆ ಸಿಗದಂತೆ ಮಾಡುವುದು, ಸಾವಿರ ಬೀಡಿಯೊಂದಿಗೆ ಒಂದು ಕಟ್ಟು ಬೀಡಿ ಹೆಚ್ಚಿಗೆ ತೆಗೆದುಕೊಳ್ಳುವುದು—ಹೀಗೆ ಕಂಟ್ರಾಕ್ಟರರು ಮಾಡುತ್ತಿರುವ ಅನ್ಯಾಯಗಳಿಗೆ ಮಿತಿ ಇಲ್ಲ. ಸಮ್ಮೇಳನದಲ್ಲಿ ಮಾತನಾಡಿದ ಹೆಚ್ಚಿನ ಪ್ರತಿನಿಧಿಗಳೂ ಕಂಟ್ರಾಕ್ಟ್ ಪದ್ಧತಿಯ ಕ್ರೂರತನದ ಹಲವು ಮುಖಗಳನ್ನು ಬಣ್ಣಿಸಿದರು. ಕಂಟ್ರಾಕ್ಟ್ ಪದ್ಧತಿಯನ್ನು ರದ್ದು ಮಾಡಿ, ಮಾಲಿಕರೇ ಎಲ್ಲಾ ಕಡೆಗಳಲ್ಲಿ ಡಿಪೋಗಳನ್ನು ತೆರೆದು ಕಾರ್ಮಿಕರಿಗೆ ಅವರ ಕೆಲಸ, ಕೂಲಿ ಮತ್ತು ಸವಲತ್ತುಗಳನ್ನು ನೇರವಾಗಿ ಕೊಡಬೇಕೆಂದು ಸಮ್ಮೇಳನವು ಅಂಗೀಕರಿಸಿದ ಠರಾವಿನಲ್ಲಿ ಒತ್ತಾಯಿಸಲಾಗಿದೆ.

ಸಾವಿರ ಬೀಡಿಗೆ 12 ರೂಪಾಯಿ ಕೂಲಿ ನಿಗದಿ ಮಾಡಬೇಕು, ಬೀಡಿ ಕೈಗಾರಿಕೆಯ ಇತರ ನೌಕರರಿಗೆ ಕೊಡುವಂತೆ ಬೀಡಿ ಕಾರ್ಮಿಕರಿಗೂ ಶೇಕಡಾ 20 ರಂತೆ ಬೋನಸ್ ಕೊಡಬೇಕು, ಪ್ರಾವಿಡೆಂಟ್ ಫಂಡಿಗೆ ವಸೂಲು ಮಾಡಿದ ಹಣಕ್ಕೆ ರಶೀದಿ ಕೊಡಬೇಕು. ಪ್ರಾವಿಡೆಂಟ್ ಫಂಡ್ ಸೌಲಭ್ಯದ ವಿರುದ್ಧ ಮಾಲಿಕರು ಸುಪ್ರೀಂ ಕೋರ್ಟಿನಲ್ಲಿ ಸಲ್ಲಿಸಿದ ದಾವೆಯಲ್ಲಿ ಸರಕಾರವು ಕೂಡಲೇ ಮಧ್ಯ ಪ್ರವೇಶಿಸಿ, ಕೋರ್ಟಿನ ತೀರ್ಮಾನವು ಬೇಗನೆ ಬರುವಂತೆ ಪ್ರಯತ್ನಿಸಬೇಕು, ಇತ್ಯಾದಿ ಬೇಡಿಕೆಗಳನ್ನೂ ಮೇಲಿನ ಠರಾವು ಒಳಗೊಂಡಿದೆ. ಈ ಎಲ್ಲಾ ಬೇಡಿಕೆಗಳನ್ನು ಒತ್ತಾಯಿಸಿ ರಾಜ್ಯಾದ್ಯಂತ ನಡೆಯಲಿರುವ ಚಳುವಳಿಯ ಪ್ರಥಮ ಹಂತವಾಗಿ ಇದೇ ಮೇ 24 ರಂದು ರಾಜ್ಯಾದ್ಯಂತ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಸರಕಾರಿ ಕಚೇರಿಗಳ ಮತ್ತು ಮಾಲಿಕರ ಕಚೇರಿಗಳ ಮುಂದೆ ಸತ್ಯಾಗ್ರಹ ಮತ್ತು ಪಿಕೆಟಿಂಗ್ ನಡೆಸಲು ಸಮ್ಮೇಳನವು ಬೀಡಿ ಕಾರ್ಮಿಕರಿಗೆ ಕರೆ ನೀಡಿದೆ.

ಜೀವನಾವಶ್ಯಕ ಸಾಮಗ್ರಿಗಳ ಬೆಲೆಗಳು ವಿಪರೀತವಾಗಿ ಏರುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿದ ಸಮ್ಮೇಳನವು ಬೆಲೆಗಳನ್ನು ಇಳಿಸಲು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸಿತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ವರ್ಷಗಳ ಹಿಂದೆ ಭೀಕರ ನೆರೆಗೆ ತುತ್ತಾಗಿ ಮನೆಮಾರು ಕಳಕೊಂಡವರಿಗೆ ಮನೆ ಕಟ್ಟಲು ಕೊಟ್ಟ ಸಾಲವನ್ನು ವಸೂಲು ಮಾಡಲು ಸರಕಾರವು ತೀರ್ಮಾನಿಸಿ, ಬಡ ಕಾರ್ಮಿಕರ ಮತ್ತು ರೈತರ ಮನೆಗಳನ್ನು ನಿರ್ದಾಕ್ಷಿಣ್ಯವಾಗಿ ಜಪ್ತಿ ಮಾಡುತ್ತಿರುವುದನ್ನು ಉಗ್ರವಾಗಿ ಖಂಡಿಸಿದ ಸಮ್ಮೇಳನವು, ಈ ಸಾಲಗಳನ್ನು ಕೂಡಲೇ ರದ್ದು ಮಾಡಬೇಕೆಂದು ಸರಕಾರವನ್ನು ಒತ್ತಾಯಿಸಿತು.

ಮಂಗಳೂರಿನ ಸಿ.ಪಿ.ಸಿ. ಸಂಸ್ಥೆಯ ನೌಕರರು ಮಾರ್ಚ್ 19 ರಿಂದ ನಡೆಸುತ್ತಿರುವ ಮುಷ್ಕರಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಲಾಯಿತು. ಸಿ. ಪಿ. ಸಿ. ಕಾರ್ಮಿಕರ ನ್ಯಾಯಬದ್ಧವಾದ ಬೇಡಿಕೆಗಳನ್ನು ಈಡೇರಿಸುವ ವಿಷಯದಲ್ಲಿ ಮಾಲಿಕರು ತೋರುತ್ತಿರುವ ಹಠಮಾರಿತನದ ಧೋರಣೆಯನ್ನು ಖಂಡಿಸಿದ ಸಮ್ಮೇಳನವು ಈ ಕಾರ್ಮಿಕರ ಬೇಡಿಕೆಗಳನ್ನು, ಕೂಡಲೇ ಈಡೇರಿಸುವಂತೆ ಮಾಲಿಕರನ್ನೂ ಸರಕಾರವನ್ನೂ ಒತ್ತಾಯಿಸಿತು.

ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಒಕ್ಕೂಟದ ಪದಾಧಿಕಾರಿಗಳು ಮತ್ತು ಸದಸ್ಯರು.

ಸಮ್ಮೇಳನವು ಈ ಕೆಳಗಿನವರನ್ನು ಪದಾಧಿಕಾರಿಗಳನ್ನಾಗಿಯೂ ಸದಸ್ಯರನ್ನಾಗಿಯೂ ಆರಿಸಿದೆ.

ಅಧ್ಯಕ್ಷ	... ಕಾಂ| ಎಸ್. ಸೂರ್ಯನಾರಾಯಣರಾವ್
ಕಾರ್ಯ ನಿರ್ವಾಹಕ ಅಧ್ಯಕ್ಷ	... ಕಾಂ| ಕೆ. ಮೂಸಬ್ಬ
ಪ್ರಧಾನ ಕಾರ್ಯದರ್ಶಿ	.... ಕಾಂ| ಮಹಮದ್ ದಸ್ತಗಿರ್
ಕಾರ್ಯದರ್ಶಿ	... ಕಾಂ| ಯು. ಬಿ. ಲೋಕಯ್ಯ
ಕೋಶಾಧಿಕಾರಿ	.... ಕಾಂ| ಬಿ. ವಾಸು ಗಟ್ಟಿ

ಸದಸ್ಯರು

1.	ಜೆ. ಬಾಲಕೃಷ್ಣ ಶೆಟ್ಟಿ	ಮಂಗಳೂರು
2.	ಬಾಬು ದೇವಾಡಿಗ	,,
3.	ಜಿ. ವೀರಪ್ಪ	,,
4.	ಸಂಜೀವ ಬಂಗೇರ	ಬಂಟ್ವಾಳ
5.	ಶಂಕರ ಕೆ.	ಕುಂದಾಪುರ
6.	ಸಾಧು ಅಮೀನ್	ಉಡುಪಿ
7.	ಬಿ. ನಾರಾಯಣ	ಪಾಣೆಮಂಗಳೂರು
8.	ಸುಶೀಲ	ಅಳಪೆ, ಮಂಗಳೂರು
9.	ಪದ್ಮಾವತಿ	ಕೋಟೆಕಾರ್
10.	ಯಮುನ	ಪದವು
11.	ಕೃಷ್ಣಮ್ಮ	ಬಂಟ್ವಾಳ
12.	ಎಸ್. ಸಿ. ಮದಾರ್	ಹರಿಹರ
13.	ಶ್ರೀಮತಿ ಮೆಹರೂನ್‌ಬಿ	ಹರಿಹರ
14.	ವಜೀರ್ ಅಹ್ಮದ್	ತುಮಕೂರು
15.	ಅಬ್ದುಲ್ ಸಲೀಮ್ (ಬಡೆ ಸಹೇಬ್)	ಕುಣಿಗಲ್
16.	ಸಲೀಮಾ ಬೇಗಂ	ಕುಣಿಗಲ್
17.	ಮಹ್ಮದ್ ಇಸ್ಮಾಯಿಲ್	ಮೈಸೂರು
18.	ಹಾಜರಾಂಬಿ	ತುಮಕೂರು

(7ನೇ ಪುಟ ನೋಡಿ)

ಎಲ್‌ಸಾಲ್ವಡೋರ್‌ನಲ್ಲಿ ವಿಯೆಟ್ನಾಂನ ಪುನರಾವರ್ತನೆ

—ಕೆ ವಿ.

(ಕಳೆದ ಸಂಚಿಕೆಯಿಂದ)

ವಿಮೋಚನಾ ಹೋರಾಟ

ಪ್ರಜಾಪ್ರಭುತ್ವ ಚಳವಳಿಗೆ ಅವಕಾಶವೇ ಇಲ್ಲದ. ಇಂತಹ ಪರಿಸ್ಥಿತಿಯಿಂದಾಗಿ 1970ರ ದಶಕದಲ್ಲಿ ವಿಮೋಚನಾ ಹೋರಾಟ ಸಶಸ್ತ್ರ ಸ್ವರೂಪ ಪಡೆದು ಎಲ್ಲಾ ರಂಗಗಳಿಗೆ ವ್ಯಾಪಿಸಲಾರಂಭಿಸಿತು. 'ಜನಪ್ರಿಯ ವಿಮೋಚನಾ ರಂಗ' (ಎಫ್.ಪಿ.ಎಲ್.) ದ ಗೆರಿಲ್ಲಾ ಹೋರಾಟಗಾರರು ಮಹಾನ್ ನಾಯಕ ಫೆರಾಬುಂದೋ ಮಾರ್ಟಿಯವರ ಹೆಸರಲ್ಲಿ ತಮ್ಮ ಸಂಘಟನೆಯ ಪುನರ್ನಾಮಕರಣಮಾಡಿ ಚಟುವಟಿಕೆಗಳನ್ನು ತೀವ್ರಗೊಳಿಸಿದರು. ವಿವಿಧ ಸಾಮೂಹಿಕ ಸಂಘಟನೆಗಳನ್ನು ಕಟ್ಟಿ 1975ರಲ್ಲಿ ಅವೆಲ್ಲವುಗಳ ಕೇಂದ್ರ ಸಾಮೂಹಿಕ ಸಂಘಟನೆ ಬಿ.ಪಿ.ಆರ್. ಸ್ಥಾಪಿಸಿದರು. ಮಿಲಿಟರಿ ಸರ್ವಾಧಿಕಾರಿಯ ದಮನ ಯಾವ ಮಟ್ಟ ತಲುಪಿತ್ತೆಂದರೆ, ಕ್ಯಾಥೋಲಿಕ್ ಚರ್ಚು ಕೂಡಾ ಪ್ರತಿಭಟಿಸಿ ಬೀದಿಗಿಳಿಯಿತು. ಚರ್ಚಿನ ನಾಯಕರುಗಳು ಪೋಪರಿಗೆ ದೂರಿತ್ತರು. (ಇತ್ತೀಚೆಗೆ ಪೋಲೆಂಡಿನ ವಿದ್ಯಮಾನಗಳ ಬಗ್ಗೆ ರೇಗನ್ ಜತೆ ತಾನೂ 'ಕಣ್ಣೀರು ಸುರಿಸಿದ' ಪೋಪರಿಗೆ ರೇಗನ್ ಕೈಗೊಂಬೆಯ ಈ ಅತ್ಯಾಚಾರಗಳ ಬಗ್ಗೆ ಕಣ್ಣೀರು ಬಂದಿರಲಿಲ್ಲ!)

ತಮ್ಮ ಹಿತಾಸಕ್ತಿಯೇ ಮುಖ್ಯವಾಗಿರುವ ಸಾಮ್ರಾಜ್ಯಶಾಹಿಗಳು ತಮ್ಮ ಕೈಗೊಂಬೆ ಅಥವಾ ಬೆಂಬಲಿಗ ಸರ್ವಾಧಿಕಾರಿಗಳು 'ಹೊರೆ' ಎನಿಸಿದಾಗಲೆಲ್ಲಾ ಮುಲಾಜಿಲ್ಲದೆ ಅವರನ್ನು ನಡುನೀರಿನಲ್ಲಿ ಮುಳುಗಿಸಿದ್ದಾರೆ. ಎಲ್‌ಸಾಲ್ವಡೋರ್‌ನ ವಿಮೋಚನಾ ಹೋರಾಟದ ವ್ಯಾಪ್ತಿ ಕಂಡ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಇದನ್ನೇ ಮಾಡಿದರು. 1979ರ ಅಕ್ಟೋಬರ್‌ನಲ್ಲಿ ಅವರು ಸೈನ್ಯಾಧಿಕಾರಿಗಳ ಇನ್ನೊಂದು ಗುಂಪಿಗೆ ಬೆಂಬಲವಿತ್ತು ಹೊಸದೊಂದು ಸೈನಿಕ-ನಾಗರಿಕ ಜಂಟೀ ಸರಕಾರ ಅಧಿಕಾರಕ್ಕೆ ಬರುವಂತೆ ಮಾಡಿದರು. ಕ್ರಾಂತಿಕಾರೀ ಗುಂಪುಗಳು ಈ ನಾಟಕದ ಮರ್ಮ ತಿಳಿದುಕೊಂಡು ಅದನ್ನು ತಿರಸ್ಕರಿಸಿದರು. ಕೆಲವು ಪ್ರಜಾಪ್ರಭುತ್ವ ಪಕ್ಷಗಳು ತಿಳಿಯದೆ ಈ ಕೂಟವನ್ನು ಸೇರಿದವು. ಆದರೆ ಕೇವಲ ಒಂದು ವರ್ಷದೊಳಗೆ ಈ ಸಮ್ಮಿಶ್ರ ಕೂಟದ ಎಲ್ಲಾ ನಾಗರಿಕ ಸದಸ್ಯರು ಹೊರಬರಬೇಕಾಯಿತು. ಅಮೇರಿಕಾದ ಬೆಂಬಲ ಪಡೆದಿದ್ದ ಉಳಿದ ಸೈನಿಕ ಸದಸ್ಯರು ರಾಜೀನಾಮೆ ನೀಡಿದವರ ಸ್ಥಾನದಲ್ಲಿ ಶ್ರೀಮಂತ ಕೈಗಾರಿಕೋದ್ಯಮಿಗಳನ್ನು ಸೇರಿಸಿಕೊಂಡು ನಾಮಮಾತ್ರಕ್ಕೆ ಈಗಿನ ಅಧ್ಯಕ್ಷ ಡುವಾರ್ಟೆಯವರನ್ನು ಅಧ್ಯಕ್ಷ ಸ್ಥಾನದಲ್ಲಿ ಕೂರಿಸಿದರು.

ಈ ಸರಕಾರ ಜನತೆಯ ವಿರುದ್ಧ ನಡೆಸದ ಅನಾಚಾರವಿಲ್ಲ. 1980ರಲ್ಲಿ ಈ ಸರಕಾರದ ಪಡೆಗಳು ಹಾಗೂ ಅವರ ಪರೋಕ್ಷ ಬೆಂಬಲ ಪಡೆದ ಬಲಪಂಥೀಯ ಅರೆಸೈನಿಕ ಸಂಘಟನೆಗಳು 15 ಸಾವಿರ ಸಾಲ್ವಡೋರ್ ನಾಗರಿಕರ ಕೊಲೆಮಾಡಿವೆ. 1981ರಲ್ಲಿ ಈ ಸಂಖ್ಯೆ ಮತ್ತೂ ಹೆಚ್ಚಿತು. ಹೆಂಗಸರು, ಮಕ್ಕಳೆನ್ನದೆ ಇವರು ನಡೆಸಿದ ದುಷ್ಕೃತ್ಯಗಳ ವರದಿ ಮೈಜುಮ್ಮೆನ್ನುವಂತಹದು. ಮಕ್ಕಳನ್ನು ಅವುಗಳ ತಂದೆ ತಾಯಿಗಳ ಸಮ್ಮುಖದಲ್ಲೇ ಕತ್ತು ಹಿಸುಕಿ, ಗೋಣು ಮುರಿದು ಕೊಲ್ಲುವುದು, ಹಸುಳೆಗಳಿಗೆ ಗ್ರೆನೇಡ್‌ಗಳನ್ನು ಕಟ್ಟಿ ಅವನ್ನು ಸಿಡಿಸುವುದು ಮುಂತಾದ ಅತ್ಯಂತ ಬರ್ಬರ ಕೃತ್ಯಗಳನ್ನು ಇವರು ನಡೆಸುತ್ತಿದ್ದಾರೆ. ಸುಮಾರು ಒಂದೂವರೆ ಲಕ್ಷ ಜನ ನಿರಾಶ್ರಿತರಾಗಿ ದೇಶ ಬಿಟ್ಟು ನೆರೆಯ ಹೊಂಡುರಾಸ್, ಗ್ವಾಟೆಮಾಲಾದ ಸರ್ವಾಧಿಕಾರಿಗಳ ಪಡೆಗಳ ಹಿಂಸೆಗೊಳಗಾಗುತ್ತಿದ್ದಾರೆ. ಇಂತಹ ಕೃತ್ಯಗಳ ಮೂಲಕ ಜನರಲ್ಲಿ ಭಯ ಹುಟ್ಟಿಸುವುದು ಈ ಸರಕಾರದ ಉದ್ದೇಶ. ಆದರೆ ದುಷ್ಕೃತ್ಯಗಳು ಎಲ್‌ಸಾಲ್ವಡೋರ್‌ನಲ್ಲಿ ವಿವಿಧ ಶಕ್ತಿಗಳು ಸಾಮ್ರಾಜ್ಯಶಾಹಿ ಪರ ಹಾಗೂ ಅದಕ್ಕೆ ವಿರುದ್ಧ ಹೀಗೆ ಎರಡು ಸ್ಪಷ್ಟ ಬಣಗಳಾಗಿ ಧ್ರುವೀಕರಣ ಹೊಂದುತ್ತಿದ್ದಾರೆ. ಸಾಮೂಹಿಕ ಸಂಘಟನೆ ವ್ಯಾಪಕಗೊಂಡು ವಿವಿಧ ಪ್ರಜಾಪ್ರಭುತ್ವವಾದೀ ಗುಂಪುಗಳು, ಗುಡಿಸಲು ವಾಸಿಗಳ, ಕಾರ್ಮಿಕರ, ವಿದ್ಯಾರ್ಥಿಗಳ, ಅಧ್ಯಾಪಕರ, ರೈತರ ಹಾಗೂ ರೈತ ಕಾರ್ಮಿಕರ ವಿವಿಧ ಸಂಘಟನೆಗಳು ಅದರಲ್ಲಿ ಸೇರುತ್ತಿವೆ. ಗೆರಿಲ್ಲಾ ಸಂಘಟನೆಗಳೆಲ್ಲಾ ಸೇರಿ 'ಫರಾಬುಂದೋ ಮಾರ್ಟಿ ರಾಷ್ಟ್ರೀಯ ವಿಮೋಚನಾ ರಂಗ' (ಎಫ್.ಎಂ.ಎಲ್.ಎನ್.) ಸ್ಥಾಪನೆಗೊಂಡಿದೆ. ಸಂಯುಕ್ತ ರಂಗ ಕಾರ್ಯ ನೀತಿಯಿಂದಾಗಿ ಜನಪ್ರಿಯ ಶಕ್ತಿಗಳು ಈ ಹಿಂದೆಂದೂ ಕಂಡಿರದ ಅಗಾಧ ಬಲ ಪಡೆದುಕೊಂಡಿವೆ.

ಅಮೇರಿಕಾ ಹಸ್ತಕ್ಷೇಪ

ಈ ಕ್ಷೇತ್ರದಲ್ಲಿ ತನ್ನ ಹಿತಾಸಕ್ತಿಗೆ ಧಕ್ಕೆ ಬಂದಾಗ ಯಾವುದೇ ವಿಧಾನದಲ್ಲಿ ಹಸ್ತಕ್ಷೇಪ ನಡೆಸಲು ಅಮೇರಿಕಾ ಎಂದೂ ಹಿಂದೆ ಮುಂದೆ ನೋಡಿರಲಿಲ್ಲ. ಚರಿತ್ರೆ ಕಂಡ ಅತೀ ದುಷ್ಟ ಸರ್ವಾಧಿಕಾರಿಗಳನ್ನು ಈ ಪ್ರದೇಶದಲ್ಲಿ ಅದು ಬೆಂಬಲಿಸಿದೆ. ಸಿ.ಐ.ಎ.ಯ ಮೂಲಕ ಅಸ್ಥಿರತೆ ತರಲು ಯತ್ನಿಸಿದೆ. ಕ್ಯೂಬಾದ ಕ್ರಾಂತಿಯ ನಂತರ ಈ ಪ್ರದೇಶದ ಸರ್ವಾಧಿಕಾರಿಗಳ ಸೈನ್ಯಗಳಿಗೆ ಜನರ ವಿಮೋಚನಾ ಹೋರಾಟಗಳನ್ನು ಸದೆಬಡೆಯುವಲ್ಲಿ ವಿಶೇಷ ತರಬೇತಿಯನ್ನು ವ್ಯವಸ್ಥೆಗೊಳಿಸಿದೆ ಮಾತ್ರವಲ್ಲ ಇಂತಹ ಕಾರ್ಯಾಚರಣೆಯಲ್ಲಿ ಪಳಗಿದ ತನ್ನ ಸ್ವಂತ ಪಡೆ 'ಗ್ರೀನ್ ಬೆರೆಟ್ಸ್'ನ್ನು ತಯಾರಿಸಿದೆ. ಎಲ್‌ಸಾಲ್ವಡೋರ್‌ನಲ್ಲಿ ಸೈನಿಕ ಹಸ್ತಕ್ಷೇಪದ ಈ ಎಲ್ಲಾ ಕಾರ್ಯಾಚರಣೆಗಳಲ್ಲಿ ಅದು ಈಗ ಭರದಲ್ಲಿ ತೊಡಗಿದೆ. 800 ಅಮೇರಿಕನ್ 'ಸಲಹೆಗಾರರು' ಈಗ ಈ ದೇಶದಲ್ಲಿದ್ದಾರೆ. ಪ್ರತೀದಿನ ಸರಾಸರಿ 10 ಯುದ್ಧ ವಿಮಾನಗಳು ಮದ್ದು-ಗುಂಡುಗಳನ್ನು, ಜನತೆಯಲ್ಲಿ ಭಯಹುಟ್ಟಿಸಲು ಪ್ರಯೋಗಿಸುವ ಸಲಕರಣೆಗಳನ್ನು ಅಮೇರಿಕಾದಿಂದ ಎಲ್‌ಸಾಲ್ವಡೋರ್‌ಗೆ ಸಾಗಿಸುತ್ತಿದೆ. 'ಗ್ರೀನ್ ಬೆರೆಟ್ಸ್' ಹಾಗೂ ಅವುಗಳ ನೇತೃತ್ವದಲ್ಲಿರುವ ಸಾಲ್ವಡೋರ್ ಸೈನ್ಯ ಪಡೆಗಳು ರಾಸಾಯನಿಕ ಹಾಗೂ ಜೈವಿಕ ಯುದ್ಧದಲ್ಲಿ ತೊಡಗಿವೆಯೆಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ವಾಸ್ತವವಾಗಿ ಭಯೋತ್ಪಾದಕ ಚಟುವಟಿಕೆಗಳ ನೇತೃತ್ವ ಈಗ ಅಮೇರಿಕಾದ 'ಗ್ರೀನ್ ಬೆರೆಟ್ಸ್' ಕೈಯಲ್ಲಿದೆ. 45 ಲಕ್ಷ ಜನ ಸಂಖ್ಯೆಯಿರುವ ದೇಶಕ್ಕೆ ಅಮೇರಿಕಾದ ಸೈನಿಕ ನೆರವು 25 ಕೋಟಿ ಡಾಲರುಗಳು ! ಇದನ್ನು 30 ಕೋಟಿ ಡಾಲರುಗಳಿಗೆ ಏರಿಸಲಾಗುವುದಂತೆ !

ಲ್ಯಾಟಿನ್ ಅಮೇರಿಕಾವನ್ನು ತಮ್ಮ ಮನೆ ಹಿತ್ತಿಲೆಂದೇ ಭಾವಿಸಿಕೊಂಡಿರುವ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಕ್ಯೂಬಾ, ನಿಕಾರಗುವಾ, ಕೆನಡಾದ ನಂತರ ಈಗ ನಾಲ್ಕನೇಯದಾಗಿ ಎಲ್‌ಸಾಲ್ವಡೋರ್ ವಿಮೋಚನೆಗೊಳ್ಳುವುದನ್ನು ಹೇಗೆ ತಾನೆ ಸಹಿಸಿಯಾರು ? ಎಲ್‌ಸಾಲ್ವಡೋರ್ ಭೌಗೋಳಿಕವಾಗಿ ಆಯಕಟ್ಟಿನ ಸ್ಥಾನದಲ್ಲಿದೆ. ಅದು ಸಾಮ್ರಾಜ್ಯಶಾಹೀ ಕೊಂಡಿಯಿಂದ ತಪ್ಪಿಸಿಕೊಂಡರೆ ಅಲ್ಲಿನ ಕಾಫಿ ಮಾತ್ರವಲ್ಲ, ಪನಾಮಾ ಕಾಲುವೆ ಮೂಲಕ ಅಮೇರಿಕಾಕ್ಕೆ ಅಪಾರ ಲಾಭ ತರುತ್ತಿರುವ ವೆನೆಜುವೆಲಾದ ತೈಲ, ಚಿಲಿಯದ ತಾಮ್ರ ಹಾಗೂ ಬೊಲೀವಿಯಾದ ತವರದ ಕೊಳ್ಳೆಗೆ ಅವಕಾಶವೆಲ್ಲಿರುತ್ತದೆ ? ಮಾತ್ರವಲ್ಲ ಈಗಾಗಲೇ ಕ್ರಾಂತಿ ಕಿಡಿ ಸೂಸುತ್ತಿರುವ ಲ್ಯಾಟಿನ್ ಅಮೇರಿಕಾ ದೇಶಗಳಲ್ಲಿ ಎಲ್‌ಸಾಲ್ವಡೋರ್‌ನ ವಿಮೋಚನಾ ಹೋರಾಟಗಾರರ ವಿಜಯದಿಂದಾಗಿ ಕ್ರಾಂತಿಯ ದಳ್ಳುರಿಯೇ ಹಬ್ಬಿದರೆ ಅದನ್ನು ಎದುರಿಸುವವರಾರು ? ಆದ್ದರಿಂದಲೇ ಎಲ್‌ಸಾಲ್ವಡೋರಿನ ವಿಮೋಚನಾ ಹೋರಾಟವನ್ನು ತಡೆಯಲು, ಆ ಮೂಲಕ ಲ್ಯಾಟಿನ್ ಅಮೇರಿಕಾದ ಕ್ರಾಂತಿಯ ಅಲೆಗಳನ್ನು ತಡೆಹಿಡಿಯಲು ಅಥವಾ ಹಿಂದಕ್ಕೆ ತಳ್ಳಲು ಸಾಮ್ರಾಜ್ಯಶಾಹಿಗಳು ಒಂದು ವಾಸ್ತವ ಯುದ್ಧದಲ್ಲಿ ತೊಡಗಿರುವುದು. ಆದ್ದರಿಂದಲೇ ರೇಗನ್ ಸರಕಾರ 'ಕಮ್ಯುನಿಸ್ಟ್ ಅಪಾಯ'ದ ಕೂಗೆಬ್ಬಿಸಿ ಕ್ಯೂಬಾ ಹಾಗೂ ನಿಕಾರಗುವಾ, ಎಲ್‌ಸಾಲ್ವಡೋರ್‌ನ ಗೆರಿಲ್ಲಾ ಹೋರಾಟಗಾರರಿಗೆ ಕುಮ್ಮಕ್ಕು ಕೊಡುತ್ತಿದ್ದಾರೆ ಎಂದು ಅಪಪ್ರಚಾರ ಮಾಡುತ್ತಿರುವುದು. ಆದರೆ ಇದನ್ನು ಅಮೇರಿಕಾದ ಪತ್ರಿಕೆಗಳು ಮತ್ತು ಎಲ್‌ಸಾಲ್ವಡೋರ್‌ನಲ್ಲಿ ಇದುವರೆಗೆ ಸ್ವತಃ ಅಮೇರಿಕಾದ ರಾಯಭಾರಿಯಾಗಿದ್ದವರೇ ನಂಬುತ್ತಿಲ್ಲ. ಅದಕ್ಕಾಗಿ ಅವರನ್ನು ವಾಪಾಸು ಕರೆಸಿಕೊಂಡು ಬೇರೊಬ್ಬರನ್ನು ನೇಮಿಸಲಾಗಿದೆ.

ಲ್ಯಾಟಿನ್ ಅಮೇರಿಕಾದಲ್ಲಿ ಒಂದು, ಎರಡು ಹಾಗೂ ಹಲವು ವಿಯೆಟ್ನಾಂಗಳಾಗಲಿವೆ ಎಂದು ಒಂದೊಮ್ಮೆ ಅರ್ನೆಸ್ಟೋ ಚೆ ಗೆವೆರಾ ಭವಿಷ್ಯ ನುಡಿದಿದ್ದರು. ಬೊಲೀವಿಯಾದ ಕಾಡುಗಳಲ್ಲಿ ಸಿ. ಐ. ಎ. ಕೈಯಲ್ಲಿ ಆತ ಸಾವಿಗೀಡಾದ 14 ವರ್ಷಗಳ ನಂತರ ಅದು ಮಧ್ಯ ಅಮೇರಿಕಾದಲ್ಲಿ ಒಂದಲ್ಲ ಹಲವು ವಿಧಗಳಲ್ಲಿ ನಿಜವಾಗುತ್ತಿದೆ.

'ಅಂತ್ಯ ಸಮೀಪಿಸುತ್ತಿರುವಂತಿದೆ'

ಈ ನಡುವೆ ಕ್ರಾಂತಿಕಾರೀ ಪ್ರಕ್ರಿಯೆ ಮುನ್ನಡೆ ಸಾಧಿಸುತ್ತಿದೆ. ಗೆರಿಲ್ಲಾ ಹೋರಾಟಗಾರರು ಈಗ ದೇಶದ ಮೂರರಲ್ಲಿ ಒಂದು ಭಾಗದ ಮೇಲೆ ಹತೋಟಿ ಪಡೆದಿದ್ದಾರೆ. ಸರ್ವಾಧಿಕಾರಿಯ 17 ಸಾವಿರ ಸೈನಿಕರು ಹಾಗೂ ಅವರ ಅಮೇರಿಕನ್ 'ಗುರು'ಗಳು ಕೇವಲ 4–5 ಸಾವಿರವಿರುವ ಗೆರಿಲ್ಲಾ ಹೋರಾಟಗಾರರನ್ನು ಎದುರಿಸಲು ವಿಫಲರಾಗಿದ್ದಾರೆ. ವಿಮೋಚನಾ ಹೋರಾಟಗಾರರು ರಸ್ತೆಗಳು, ಸೇತುವೆಗಳು ಹಾಗೂ ವಿದ್ಯುದಾಗಾರಗಳ ಮೇಲೆ ದಾಳಿಮಾಡಿ ಅವನ್ನು ನಿರುಪಯುಕ್ತಗೊಳಿಸುತ್ತಿದ್ದರೆ ಸರ್ವಾಧಿಕಾರಿಗಳ ಸೈನಿಕರು ಅಸಹಾಯಕರಾಗಿ ನಿಂತು ನೋಡುತ್ತಿದ್ದಾರೆ. ಸೇತುವೆಗಳು ಹಾಗೂ ವಿದ್ಯುದಾಗಾರ ಮೇಲಿನ ಧಾಳಿಗಳು ಎಲ್‌ಸಾಲ್ವಡೋರ್‌ನ ಜನಜೀವನವನ್ನು, ವಿಶೇಷವಾಗಿ ಆರ್ಥಿಕ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಿವೆ. ದೇಶದ ಮುಕ್ಕಾಲು ಭಾಗ ಒಂದರಲ್ಲಿ ಒಂದು ಹೊತ್ತಿನಲ್ಲಿ ವಿದ್ಯುಶ್ಛಕ್ತಿಯಿಲ್ಲದೆ ಇರಬೇಕಾಗಿದೆ. "ಕತ್ತಲೆಯಲ್ಲಿ ಕೋವಿ ಗುಂಡಿನ ಶಬ್ದ ಜೋರಾದಂತೆ ಕೇಳಿಸುತ್ತಿದೆ, ಅಂತ್ಯ ಸಮೀಪಿಸುತ್ತಿರುವಂತೆ ಕಾಣುತ್ತಿದೆ" ಎಂದು ಒಬ್ಬ ಕ್ರೈಸ್ತ ಪಾದರಿ ಉದ್ಗಾರವೆತ್ತಿದರಂತೆ.

ಎಲ್‌ಸಾಲ್ವಡೋರ್‌ನ ನಾಗರಿಕರ ಈ ತೊಳಲಾಟದ ಅಂತ್ಯ ಸಮೀಪಿಸುತ್ತಿದೆಯೇ ? ಆ ದಿನ ಎಂದು ಬಂದೀತು ? ಈ ಬಗ್ಗೆ ನಿಖರವಾಗಿ ಹೇಳಲು ಸಾಧ್ಯವಿಲ್ಲ. ಫ್ರಾನ್ಸ್, ಮೆಕ್ಸಿಕೋ ಹಾಗೂ ಅಲಿಪ್ತ ದೇಶಗಳು ಅಮೇರಿಕಾದ ಸಾಮ್ರಾಜ್ಯಶಾಹಿಗಳ ನಿಲುವಿಗೆ ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಸಮಾಜವಾದಿ ಅಂತರ್ರಾಷ್ಟ್ರೀಯ (Socialist Internation) ಗೆರಿಲ್ಲಾ ಹೋರಾಟಗಾರರಿಗೆ ಬೆಂಬಲ ವ್ಯಕ್ತಪಡಿಸಿದೆ. ಆದರೆ ಕಲಹಪ್ರಿಯ ಮತ್ತು ಸುಮಾರಾಗಿ ಫ್ಯಾಸಿಸ್ಟೇ ಎನ್ನಬಹುದಾದ ರೇಗನ್ ಸರಕಾರ ಎಷ್ಟೊಂದು ಹೀನ ಮಟ್ಟಕ್ಕಿಳಿಯಬಹುದೆಂದು ಯಾರಿಗೂ ಹೇಳಲು ಸಾಧ್ಯವಿಲ್ಲ. ಈಗಾಗಲೇ ಕ್ಯೂಬಾ ಹಾಗೂ ನಿಕಾರಗುವಾದ ಮೇಲೆ ದಾಳಿ ನಡೆಸುವ ಬೆದರಿಕೆಯನ್ನು ಆತ ಹಾಕಿದ್ದಾನೆ. ಆದ್ದರಿಂದ ಎಲ್‌ಸಾಲ್ವಡೋರ್ ಕ್ರಾಂತಿಕಾರರು ಅಂತಿಮವಾಗಿ ಜಯಗಳಿಸುವ ಮೊದಲು ಇನ್ನಷ್ಟು ರಕ್ತಪಾತವನ್ನು ಕಾಣಬೇಕಾಗಬಹುದು. ಸದ್ಯ ಗೆರಿಲ್ಲಾ ಹೋರಾಟಗಾರರು ಎಲ್‌ಸಾಲ್ವಡೋರ್ ಮಾತ್ರವಲ್ಲ ಸುತ್ತಮುತ್ತಲ ಇತರ ದೇಶಗಳಲ್ಲೂ ಜಯಗಳಿಸುತ್ತಿದ್ದಾರೆ. ಹತ್ತು ವರ್ಷಗಳ ಹಿಂದೆ ಲ್ಯಾಟಿನ್ ಅಮೇರಿಕಾದಲ್ಲಿ ಸಾಮ್ರಾಜ್ಯ ಶಾಹೀ-ವಿರೋಧೀ ಹೋರಾಟ ಆ ಖಂಡದ ದಕ್ಷಿಣ ಮೂಲೆಯಲ್ಲಿ ಮಾತ್ರವಿತ್ತು. ಈಗ ಅದು ಮಧ್ಯ ಅಮೇರಿಕಾ ಹಾಗೂ ಕೆರೀಬಿಯನ್ ಪ್ರದೇಶದಲ್ಲಿ ಬಲಗೊಂಡಿದೆ. ಅಂತಿಮವಾಗಿ ಕ್ಯೂಬಾ, ನಿಕಾರಗುವಾ ಹಾಗೂ ವಿಯೆಟ್ನಾಂನ ದಾರಿಯನ್ನೇ ಈ ದೇಶಗಳು ಅನುಸರಿಸಲಿವೆ.

['ಸೋಶಿಯಲ್ ಸೈಂಟಿಸ್ಟ್'ನಿಂದ ಸಾಧಾರ]

ಲೇಖಾಂಕ-4

ಪಕ್ಷದ ಹನ್ನೊಂದನೆ ಅಧಿವೇಶನ ಕುರಿತು

—ವಿ. ಜೆ. ಕೆ. ನಾಯರ್

[ಈ ಲೇಖನ ಮಾಲೆಯಲ್ಲಿ ನಾವು ಈಗಾಗಲೇ ಮೊದಲ ಲೇಖಾಂಕದಲ್ಲಿ ಅಂತರ್ರಾಷ್ಟ್ರೀಯ ವಿಷಯಗಳ ಬಗ್ಗೆ ಚರ್ಚಿಸಿದ್ದೇವೆ. ಎರಡನೇ ಲೇಖನದಲ್ಲಿ ರಾಷ್ಟ್ರೀಯ ಪರಿಸ್ಥಿತಿಗೆ ಸಂಬಂಧಪಟ್ಟಂತೆ ಕಾರ್ಯಕ್ರಮಾತ್ಮಕ ತಿಳುವಳಿಕೆಯ ಬಗ್ಗೆ ಪರಿಶೀಲಿಸಲಾಯಿತು. ಮೂರನೇ ಲೇಖನ ಎಡ ಹಾಗೂ ಪ್ರಜಾಪ್ರಭುತ್ವ ರಂಗದ ಮಧ್ಯಂತರ ಘೋಷಣೆಯನ್ನು ಕುರಿತಾಗಿತ್ತು. ಸರ್ವಾಧಿಕಾರಕ್ಕೆ ವಿಶಾಲ ಪ್ರತಿರೋಧದ ಪ್ರಶ್ನೆಯನ್ನು ಈ ಲೇಖನದಲ್ಲಿ ಪರಿಶೀಲಿಸಲಾಗಿದೆ.]

ಪಕ್ಷದ ಜಲಂಧರ್ ಅಧಿವೇಶನ ಎರಡು ಘೋಷಣೆಗಳನ್ನು ಪ್ರತಿಪಾದಿಸಿತ್ತು—ಎಡ ಹಾಗೂ ಪ್ರಜಾಪ್ರಭುತ್ವ ರಂಗ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ವಿಶಾಲ ವೇದಿಕೆ. ಜಲಂಧರ್ ಅಧಿವೇಶನ (ಏಪ್ರಿಲ್ 1978)ದ ಸಮಯದ ರಾಜಕೀಯ ಪರಿಸ್ಥಿತಿ ಏನಿತ್ತೆಂದರೆ 1975-76ರಲ್ಲಿ ದೇಶವನ್ನು ಫ್ಯಾಸಿಸ್ಟ್ ಸರ್ವಾಧಿಕಾರದ ಅಂಚಿಗೆ ತಂದು ನಿಲ್ಲಿಸಿದ್ದ ಕಾಂಗ್ರೆಸ್ (ಐ)ನ್ನು ಅಧಿಕಾರದಿಂದ ಇಳಿಸಲಾಗಿತ್ತು. ಕೇಂದ್ರದಲ್ಲಿ ಕಾಂಗ್ರೆಸ್‌ನ 30 ವರ್ಷಗಳ ಗುತ್ತೇದಾರೀ ಆಳ್ವಿಕೆಕೊನೆಗೊಂಡಿತ್ತು. —ಬೂರ್ಜ್ವಾ-ಭೂಮಾಲಿಕ ಪಕ್ಷಗಳ ಕೆಲವು ವಿಭಾಗಗಳಿಗೂ ಸರ್ವಾಧಿಕಾರದ ದವಡೆಗಳ ತೀಕ್ಷ್ಣ ಅನುಭವ ಆಂತರಿಕ ತುರ್ತು ಪರಿಸ್ಥಿತಿಯ ಸಮಯದಲ್ಲಾಗಿತ್ತು. ನಾಗರಿಕ ಹಕ್ಕುಗಳ ಪುನಃಸ್ಥಾಪನೆಯ ಹೋರಾಟದಲ್ಲಿ ಅವರೂ ಸೇರಿಕೊಂಡರು. ಜನರ ನಡುವೆ ಎದ್ದ ಸರ್ವಾಧಿಕಾರ ವಿರೋಧೀ ಅಲೆ ಕಾಂಗ್ರೆಸ್ (ಐ)ನ್ನು ಅಧಿಕಾರದಿಂದ ಹೊರಗೆಸೆದುಬಿಟ್ಟಿತ್ತು. ಈ ಅಲೆಯನ್ನೇರಿ ಜನತಾ ಪಕ್ಷ ಅಧಿಕಾರಾರೂಢವಾಯಿತು.

ಕಾಂಗ್ರೆಸ್ (ಐ)ನ್ನು ಅಧಿಕಾರದಿಂದ ಹೊರದೂಡಿದ ಮೇಲೆ ಇಂದಿರಾಗಾಂಧಿ ಕಥೆ ಮುಗಿಯಿತು, ಹಾಗೂ ಇಂದಿರಾ ಗಾಂಧಿ ಅಧಿಕಾರ ಕಳಕೊಂಡ ಮೇಲೆ ಸರ್ವಾಧಿಕಾರ ಮತ್ತೊಮ್ಮೆ ತಲೆಯೆತ್ತಲು ಸಾಧ್ಯವೇ ಇಲ್ಲ ಎಂದು ಕೆಲವರು ಭಾವಿಸಿದರು. ಆದರೆ ಜಲಂಧರ್ ಅಧಿವೇಶನ ಗಮನಿಸಿದಂತೆ ಬೂರ್ಜ್ವಾ-ಭೂಮಾಲಿಕ ವರ್ಗಗಳ ಆಳ್ವಿಕೆಯಲ್ಲಿ ಅದು ಮತ್ತೊಮ್ಮೆ ಪ್ರಕಟವಾಗುತ್ತದೆಯೆಂಬುದರ ಬಗ್ಗೆ ನಮ್ಮ ಪಕ್ಷಕ್ಕೆ ಅನುಮಾನವೇ ಇರಲಿಲ್ಲ. ಬೂರ್ಜ್ವಾ-ಭೂಮಾಲಕ ಆಳ್ವಿಕೆಯನ್ನು ಕೊನೆಗೊಳಿಸಿ ಜನತಾ ಪ್ರಜಾಪ್ರಭುತ್ವ ಸ್ಥಾಪಿಸುವವರೆಗೆ ಸರ್ವಾಧಿಕಾರದ ವಿರುದ್ಧ ಹೋರಾಟ ಮುಂದುವರಿಯುತ್ತಲೇ ಇರುತ್ತದೆ ಎಂದು ಜಲಂಧರ್ ಅಧಿವೇಶನ ಗಮನಿಸಿತ್ತು. ತಮ್ಮ ಮೇಲೆ ಹೆಚ್ಚುತ್ತಿರುವ ಹೊರೆಗೆ ಪ್ರತಿರೋಧ ವ್ಯಕ್ತಪಡಿಸಿದ ಜನರನ್ನು ದಮನಮಾಡಲು ಸರ್ವಾಧಿಕಾರ ಬಂತು. ಜನತಾ ಪಕ್ಷದ ವರ್ಗ ರಚನೆ ಕಾಂಗ್ರೆಸ್ಸಿಗಿಂತ ಭಿನ್ನವಾಗಿಲ್ಲವಾದ್ದರಿಂದ ಅದರ ಆರ್ಥಿಕ ಧೋರಣೆಗಳೂ ಗುತ್ತೇದಾರಿಗಳನ್ನು, ಭೂಮಾಲಕರನ್ನು ಶ್ರೀಮಂತಗೊಳಿಸುತ್ತಾ ಹೋಗುತ್ತವೆ. ಇದರ ಫಲಿತಾಂಶವೇನಾಗಬಹುದೆಂದರೆ ಜನ ಅವಕ್ಕೆ ಪ್ರತಿಭಟನೆ ವ್ಯಕ್ತಪಡಿಸಲಾರಂಭಿಸುತ್ತಾರೆ. ಮತ್ತು ಅದರೊಂದಿಗೇ ಸರ್ವಾಧಿಕಾರದ ಭಯ ಇದ್ದೇ ಇರುತ್ತದೆ ಎಂದು ಹತ್ತನೇ ಅಧಿವೇಶನ ಭವಿಷ್ಯ ನುಡಿದಿತ್ತು. ಆದ್ದರಿಂದಲೇ ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸಲು ಶಕ್ತಿಗಳನ್ನು ಮತ್ತೆ ಕ್ರೋಢೀಕರಿಸಲು ಶ್ರಮಿಸುವುದಾಗಿ ಅಧಿವೇಶನ ಪ್ರತಿಜ್ಞೆ ಮಾಡಿತ್ತು. ಎಡ ಮತ್ತು ಪ್ರಜಾಪ್ರಭುತ್ವ ರಂಗವಲ್ಲದೆ ಸರ್ವಾಧಿಕಾರ ವಿರೋಧೀ ವೇದಿಕೆಯ ಮೇಲೆ ಅತಿ ವಿಸ್ತೃತವಾದ ಐಕ್ಯ ಕಾರ್ಯಾಚರಣೆಯನ್ನು ಅಧಿವೇಶನ ಚಿತ್ರಿಸಿಕೊಂಡಿತು. ಆದ್ದರಿಂದಲೇ 'ವಿಶಾಲ ವೇದಿಕೆ'ಯ ಹೆಸರು ಬಂದದ್ದು.

೧೯೮೦ರ ನಂತರ

ಹನ್ನೊಂದನೇ ಅಧಿವೇಶನದ ವೇಳೆಗೆ ರಾಜಕೀಯ ಪರಿಸ್ಥಿತಿ ಬದಲಾಗಿತ್ತು. ಅದು ಇನ್ನಷ್ಟು ಕೆಟ್ಟಿತ್ತು. ಜನತಾ ಪಕ್ಷದೊಳಗಿನ ಆಂತರಿಕ ಕಚ್ಚಾಟ, ಜನರ ಮೇಲೆ ಕೋಮುವಾದಿ ಶಕ್ತಿಗಳ ಹಲ್ಲೆ ಇತ್ಯಾದಿಗಳಿಂದ ಸಾರ್ವತ್ರಿಕವಾಗಿ ಹರಡಿದ ಭ್ರಾಂತಿನಿವಾರಣೆಯ ಲಾಭ ಪಡೆದು ಕಾಂಗ್ರೆಸ್ (ಐ) 1980ರಲ್ಲಿ ಅಧಿಕಾರಕ್ಕೆ ವಾಪಸು ಬಂದಿತ್ತು. ಹಲವು ಕ್ರಮಗಳ ಮೂಲಕ ತುರ್ತು ಪರಿಸ್ಥಿತಿ ಮತ್ತೆ ತರಲು ಆಳುವ ಕಾಂಗ್ರೆಸ್ (ಐ) ಪ್ರಯತ್ನಿಸುತ್ತಿದೆ. ಜನತೆಯ ಹಕ್ಕುಗಳನ್ನು ದಮನಿಸಲು ಅಗತ್ಯ ಸೇವಾ ನಿರ್ವಹಣಾ ಶಾಸನ (ಇ.ಎಸ್.ಎಂ.ಎ.), ರಾಷ್ಟ್ರೀಯ ಭದ್ರತಾ ಶಾಸನ (ಎನ್. ಎಸ್. ಎ.) ಇತ್ಯಾದಿಗಳನ್ನು ಅದು ಪಾಸುಮಾಡಿಸಿಕೊಂಡಿದೆ. ಅಗತ್ಯ ಸಾಮಗ್ರಿಗಳ ಶಾಸನವನ್ನು ತಿದ್ದಿ ನಿವಾರಕ ಬಂಧನವನ್ನೂ ಸೇರಿಸಲಾಗಿದೆ. ಅಧಿಕಾರಶಾಹಿಯ ಕಾನೂನುಬಾಹಿರ ಕಾರ್ಯನಿರ್ವಹಣೆ ರಾಜಕೀಯ ರಕ್ಷಣೆ ಪಡೆದ ಗೂಂಡಾಗಿರಿಯ ನೆರವು, ಪ್ರೋತ್ಸಾಹದಿಂದ ಹೆಚುತ್ತಾ ಹೋಗುತ್ತಿದೆ. ಬಂಗಾಳ ಸರಕಾರವನ್ನು ಬಂಗಾಳ ಕೊಲ್ಲಿಗೆ ಎಸೆಯುವ ಬೆದರಿಕೆಯನ್ನು ಕಾರ್ಯರೂಪಕ್ಕೆ ತರಲು ಇಂದಿರಾಗೆ ಆಗದಿದ್ದರೂ, ಎಡ ನೇತೃತ್ವದ ಸರಕಾರಗಳ ಮೇಲೆ ಹಲ್ಲೆ ಹೆಚ್ಚುತ್ತಾ ಹೋಗಿದೆ. ಆಗೀಗ ಸಂಸದೀಯ ಪ್ರಜಾಪ್ರಭುತ್ವವನ್ನು ಕೊನೆಗೊಳಿಸಿ ಅಧ್ಯಕ್ಷೀಯ ಮಾದರಿಯನ್ನು ತರುವ ಬೆದರಿಕೆ ಹಾಕಲಾಗುತ್ತಿದೆ. ಪತ್ರಿಕಾರಂಗ, ನ್ಯಾಯಾಂಗ ಹಾಗೂ ವಿರೋಧ ಪಕ್ಷಗಳ ಮೇಲೆ ಹಲ್ಲೆಗಳು ಎಗ್ಗಿಲ್ಲದೆ ಮುಂದುವರಿಯುತ್ತಿವೆ. ಹರಿಜನರು, ಗಿರಿಜನರು ಹಾಗೂ ಸಾಮಾಜಿಕವಾಗಿ ಶೋಷಣೆಗೊಳಗಾದ ಇತರರ ಮೇಲೆ ಹಲ್ಲೆ ಹಾಗೂ ಕೊಲೆ ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ಕಾರ್ಮಿಕ ವರ್ಗದ ಹಾಗೂ ರೈತರ ಹೋರಾಟಗಳ ದಮನದಲ್ಲಿ ಹಿಂದಿನ ಎಲ್ಲಾ ದಾಖಲೆಗಳನ್ನು ಮೀರಲಾಗಿದೆ. ಈ ಸರ್ವಾಧಿಕಾರೀ ಕ್ರಮಗಳನ್ನು ಸುಮಾರಾಗಿ ಎಲ್ಲಾ ಪಕ್ಷಗಳು ಪ್ರತಿಭಟಿಸಿವೆ.

ರಾಜಕೀಯ ರಂಗವಲ್ಲ

ಪಶ್ಚಿಮ ಬಂಗಾಳ, ತ್ರಿಪುರಾ ಹಾಗೂ ಕೇರಳದ ಎಡನೇತೃತ್ವದ ಸರಕಾರಗಳ ಮೇಲೆ ಹಲ್ಲೆ ನಡೆಸುವಲ್ಲಿ ಇಂದಿರಾಗೆ ಅಖಿಲ ಭಾರತ ಮಟ್ಟದಲ್ಲಿ ಬೇರೆ ಯಾವ ಬೂರ್ಜ್ವಾ-ಭೂಮಾಲಕ ಪಕ್ಷಗಳ ಬೆಂಬಲವೂ ಸಿಗಲಿಲ್ಲ. ಅಗತ್ಯ ಸೇವಾನಿರ್ವಹಣಾ ಮಸೂದೆಯ ಅಂಗೀಕಾರದ ವಿರುದ್ಧ ಡಿ.ಎಂ.ಕೆ. ಬಿಟ್ಟು ಉಳಿದೆಲ್ಲಾ ವಿರೋಧ ಪಕ್ಷಗಳು ಸಂಸತ್ತಿನಲ್ಲಿ ಸತತವಾಗಿ ಪ್ರತಿಭಟಿಸಿದವು. ಕಾಂಗ್ರೆಸ್ (ಐ) ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ ಈ ಎಲ್ಲಾ ಪಕ್ಷಗಳು ಸಹಿ ಹಾಕಿದ್ದವು. ಇವೆಲ್ಲಾ ಸರ್ವಾಧಿಕಾರದ ವಿರುದ್ಧ ವಿಶಾಲ ಪ್ರತಿರೋಧದ ಕ್ರಮಾಚರಣೆಗಳೇ. ಇದನ್ನು ಒಂದು ರಂಗವೆಂದು ಯಾರೂ ಗೊಂದಲಮಾಡಿಕೊಳ್ಳಬಾರದೆಂದು ಹನ್ನೊಂದನೇ ಅಧಿವೇಶನ 'ವೇದಿಕೆ' ಎಂಬ ಶಬ್ದವನ್ನು ಬಿಟ್ಟು 'ಸರ್ವಾಧಿಕಾರಕ್ಕೆ ವಿಶಾಲ ಪ್ರತಿರೋಧ' ಎಂಬ ಮಾತನ್ನು ಉಪಯೋಗಿಸಿದೆ.

'ವಿಶಾಲ ಪ್ರತಿರೋಧ' ಘೋಷಣೆಯ ಟೀಕಿಸುವವರು ಅದನ್ನು ಬಿ.ಜೆ.ಪಿ.ಯೊಂದಿಗೆ 'ಮೈತ್ರಿ' ಎಂಬುದಕ್ಕಿಳಿದಿದ್ದಾರೆ. ಅತ್ಯಂತ ಕೋಮುವಾದಿ, ಕಮ್ಯುನಿಸ್ಟ್ - ವಿರೋಧಿ ಹಾಗೂ ಸಾಮ್ರಾಜ್ಯಶಾಹೀ ಪರ ಸಂಘಟನೆಯಾದ ಬಿ.ಜೆ.ಪಿ.ಯೊಂದಿಗೆ ಮೈತ್ರಿಯ ಪ್ರಶ್ನೆಯೇ ಇಲ್ಲವೆಂದು ನಮ್ಮ ಪಕ್ಷ ಆಗಲೇ ಸ್ಪಷ್ಟಪಡಿಸಿದೆ. 'ವಿಶಾಲ ಪ್ರತಿರೋಧ'ದ ಘೋಷಣೆಯ ಅರ್ಥ ಸರ್ವಾಧಿಕಾರದ ವಿರುದ್ಧ ಹೋರಾಡಲು ರಾಜಕೀಯ ರಂಗವಿರುತ್ತದೆಯೆಂದೇನಲ್ಲ. ಆದರೆ ಎಲ್ಲೆಲ್ಲಿ ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಹೋರಾಟ ನಡೆಯುತ್ತಿದೆಯೋ ಅಂತಹ ಹೋರಾಟ ಪಡೆಯುವ ವಿಸ್ತೃತ ಹರಹನ್ನು ಸೀಮಿತಗೊಳಿಸದೆ ಸಿ.ಪಿ.ಐ.(ಎಂ)ಅದರಲ್ಲಿ ಸಾಧ್ಯವಿದ್ದಷ್ಟು ವಿಶಾಲ ಜನಸ್ತೋಮ ಭಾಗವಹಿಸುವಂತೆ ಮಾಡಬಯಸುತ್ತದೆ.

'ವಿಶಾಲ ಪ್ರತಿರೋಧ'ದ ಘೋಷಣೆಯನ್ನು ಟೀಕಿಸುವವರು ಸರ್ವಾಧಿಕಾರ ಮುಖ್ಯ ಅಪಾಯ ಎಂಬುದನ್ನು ಸ್ವೀಕರಿಸಲು ತಯಾರಿಲ್ಲ. ಕೋಮುವಾದ ಅಷ್ಟೇ ಬಲವಾದ ಅಪಾಯವೆಂದು ಅವರು ಭಾವಿಸುತ್ತಾರೆ. ಸರ್ವಾಧಿಕಾರ ಮತ್ತು ಕೋಮುವಾದ ಅವಳಿ ಅಪಾಯಗಳೆಂದು ಅವರೆನ್ನುತ್ತಾರೆ. ನಮ್ಮ ಕೇಂದ್ರ ಸಮಿತಿ ಒಂದೊಮ್ಮೆ 'ಅವಳಿ ಅಪಾಯ' ಎಂಬ ಮಾತನ್ನು 1979ರ ಜುಲೈ ಬಿಕ್ಕಟ್ಟಿನ ಸಮಯದ ಪರಿಸ್ಥಿತಿಯನ್ನು ವರ್ಣಿಸಲು ಉಪಯೋಗಿಸಿತ್ತು. 1980ರಲ್ಲಿ ಚುನಾವಣೆಯ ಪರಿಶೀಲನೆ ಮಾಡುವಾಗ ಕೇಂದ್ರ ಸಮಿತಿ ಅದನ್ನು ಸರಿಪಡಿಸಿಕೊಂಡಿತ್ತು. ಕೋಮುವಾದೀ ಶಕ್ತಿಗಳನ್ನು ಹಾಗೂ ಸರ್ವಾಧಿಕಾರೀ ಶಕ್ತಿಗಳನ್ನು ಸಮೀಕರಿಸುವುದೆಂದರೆ ಒಂದು ಪ್ರಮುಖ ರಾಜಕೀಯ ಅಂಶವನ್ನು ಮರೆತಂತೆ.

ಪ್ರಮುಖ ಅಪಾಯ

ಈಗಿನ ಪ್ರಭುತ್ವ ಯಂತ್ರವನ್ನು ನಡೆಸುತ್ತಿರುವವರು ಸರ್ವಾಧಿಕಾರೀ ಶಕ್ತಿಗಳು. ಈಗ ಸರ್ವಾಧಿಕಾರೀ ಪ್ರಭುತ್ವ ಯಂತ್ರದಲ್ಲಿ ಕೋಮುವಾದಿಗಳಿಗೂ ರಕ್ಷಣೆ ದೊರೆಯುತ್ತಿದೆ. ಸರ್ವಾಧಿಕಾರೀ ಶಕ್ತಿಗಳು ಕೇರಳದ ಎಡನೇತೃತ್ವದ ಸರಕಾರವನ್ನು ಅಸ್ಥಿರಗೊಳಿಸಲು ಕೋಮುವಾದಿ ಶಕ್ತಿಗಳನ್ನು ಉಪಯೋಗಿಸಿದ್ದನ್ನು ನಾವು ಸ್ಪಷ್ಟವಾಗಿ ಕಂಡಿದ್ದೇವೆ. ಹಾಗಿದ್ದರೂ ಅಖಿಲ ಭಾರತ ಮಟ್ಟದಲ್ಲಿ ಕೋಮುವಾದೀ ಪಕ್ಷವಾದ ಬಿ.ಜೆ.ಪಿ. ಕೇರಳದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಕಾಂಗ್ರೆಸ್ (ಐ) ಹೇರಿದಾಗ ಅದನ್ನು ಒಪ್ಪಲು ತಯಾರಾಗಲಿಲ್ಲ. ಎಡ ನೇತೃತ್ವದ ಸರಕಾರಗಳ ವಿರುದ್ಧ ತನ್ನೆಲ್ಲಾ ಆಯುಧ ಉಪಯೋಗಿಸ ಹೊರಟಿರುವುದು ಸರ್ವಾಧಿಕಾರೀ ಶಕ್ತಿಗಳು. ಅಧ್ಯಕ್ಷೀಯ ಮಾದರಿಯ ಅಪಾಯ ಕೂಡ ಕೋಮುವಾದೀ ಪಕ್ಷದಿಂದ ಹೊಮ್ಮಿರುವ ಅಪಾಯವೇನಲ್ಲ. ಈ ಎಲ್ಲಾ ಸರ್ವಾಧಿಕಾರ ವಿರೋಧೀ ಆಂದೋಲನಗಳಲ್ಲಿ ನಾವು ತಳೆಯಬಹುದಾದ ಸರಿಯಾದ ನಿಲುವೆಂದರೆ ಸರ್ವಾಧಿಕಾರೀ ಶಕ್ತಿಗಳ ವಿರುದ್ಧ ಹೋರಾಡುವ ಯಾವುದೇ ಶಕ್ತಿಯ ಉಪಯೋಗ ಮಾಡಿಕೊಳ್ಳುವುದು.

ಫ್ಯಾಸಿಸ್ಟ್ ಹಿಟ್ಲರನ ಜರ್ಮನಿಯೊಂದಿಗೆ ಕಾಮ್ರೇಡ್ ಸ್ಟಾಲಿನ್ ಮಾಡಿಕೊಂಡ ಅನಾಕ್ರಮಣ ಸಂಧಿಯನ್ನು ಕಾಂ। ಇ.ಎಂ.ಎಸ್. ಉದಾಹರಿಸುತ್ತಾರೆ: ಒಂದೆಡೆ ಸಮಯಗಳಿಸಲು, ಇನ್ನೊಂದೆಡೆ ಹಿಟ್ಲರನ ಗಮನ ಇಂಗ್ಲೆಂಡ್, ಫ್ರಾನ್ಸ್ ಇತ್ಯಾದಿ ಕಡೆ ತಿರುಗಿಸಲು ಸ್ಟಾಲಿನ್ ಹೀಗೆ ಮಾಡಿದರು. ಹಿಟ್ಲರ್ ಇಂಗ್ಲೆಂಡ್ ಹಾಗೂ ಫ್ರಾನ್ಸ್ ಮೇಲೆ ದಾಳಿ ನಡೆಸಿದ್ದರಿಂದ ಅವು ಹಾಗೂ ಅಮೇರಿಕಾ ಸಂಯುಕ್ತ ಸಂಸ್ಥಾನ ಫ್ಯಾಸಿಸ್ಟ್ ದಾಳಿಯನ್ನು ಹಿಮ್ಮೆಟ್ಟಿಸುವಲ್ಲಿ ಹಾಗೂ ಅಂತಿಮವಾಗಿ ಫ್ಯಾಸಿಸ್ಟ್ ಜರ್ಮನಿಯನ್ನು ಸೋಲಿಸುವಲ್ಲಿ ಸೋವಿಯೆಟ್ ಸಂಘದೊಡನೆ ಸೇರಿಕೊಳ್ಳುವಂತಾಯಿತು. ಇಂತಹ ಕದನವಿರಾಮ ಮಾಡಿಕೊಂಡ ಸ್ಟಾಲಿನರನ್ನು ಟೀಕಿಸುವವರದ್ದು ಸರಿಯಾದ ನಿಲುವೇ? ಈ ಫ್ಯಾಸಿಸ್ಟ್ ವಿರೋಧೀ ಯುದ್ಧದಲ್ಲಿ ಸಾಮ್ರಾಜ್ಯಶಾಹೀ ಇಂಗ್ಲೆಂಡ್ ಹಾಗೂ ಫ್ರಾನ್ಸ್‌ನೊಂದಿಗೆ ಸೇರಿಕೊಂಡದ್ದಕ್ಕಾಗಿ ಸೋವಿಯೆಟ್ ಸಂಘವನ್ನು ಖಂಡಿಸುವುದು ಸಾಧ್ಯವೇ ?

ಮತ್ತೆ ತಪ್ಪು ಮಾಡದಿರಲಿ

ನಮ್ಮ 'ವಿಶಾಲ ಪ್ರತಿರೋಧ' ಒಂದು ರಾಜಕೀಯ ರಂಗವಲ್ಲ. ಬಿ.ಜೆ.ಪಿ.ಯೊಂದಿಗೆ ಚುನಾವಣಾ ಮೈತ್ರಿಯೇ ಏಕೆ ಚುನಾವಣಾ ಹೊಂದಾಣಿಕೆ ಕೂಡಾ ನಮ್ಮ ಉದ್ದೇಶವಲ್ಲ. ಈಗಾಗಲೇ ನಡೆಯುತ್ತಿರುವ ಪ್ರತಿಭಟನೆಯ ವಾಸ್ತವ ಸಂಗತಿಯನ್ನು ಒಪ್ಪಿಕೊಳ್ಳುವುದಷ್ಟೇ ಈ ಘೋಷಣೆ.

ಸರ್ವಾಧಿಕಾರದ ವಿರುದ್ಧ 'ವಿಶಾಲ ಪ್ರತಿರೋಧ'ವೆಂದರೆ ಇಂದಿರಾ ಗಾಂಧಿಯವರನ್ನು ಎಲ್ಲಾ ಪ್ರಶ್ನೆಗಳ ಮೇಲೂ ವಿರೋಧಿಸುವುದೆಂದೇನಲ್ಲ. ವಿದೇಶ ಧೋರಣೆಗಳಲ್ಲಿ, ವಿಚ್ಛಿದ್ರಕಾರೀ ಶಕ್ತಿಗಳ ಸವಾಲು ಎದುರಿಸುವ ಪ್ರಶ್ನೆಯನ್ನು ಕುರಿತು ನಮ್ಮ ದೃಷ್ಟಿಕೋನ, ಆಕೆಯ ಅಭಿಪ್ರಾಯದೊಂದಿಗೆ ಸರಿಹೊಂದುತ್ತವೆ. ಇದನ್ನು ನೇರವಾಗಿ ಹೇಳಲು ನಾವು ಹಿಂಜರಿಯುವುದಿಲ್ಲ. ಇದನ್ನು ಹೇಗೆ ನಾವು ಆಕೆಗೆ ವಿಧೇಯರಾಗಿರುತ್ತೇವೆಂದೋ, ಆಕೆಯೊಂದಿಗೆ ರಾಜಕೀಯರಂಗ ರಚಿಸಿಕೊಳ್ಳುತ್ತೇವೆಂದೋ ಅರ್ಥೈಸಿಕೊಳ್ಳಲು ಸಾಧ್ಯವಿಲ್ಲವೋ ಅದೇ ರೀತಿ 'ಸರ್ವಾಧಿಕಾರಕ್ಕೆ ವಿಶಾಲ ಪ್ರತಿರೋಧ'ದ ನೆವದಲ್ಲಿ ಯಾವುದೇ ರಾಜಕೀಯ ಮೈತ್ರಿ ಸಾಧಿಸಲಾಗುವುದು ಎಂಬುದೂ ಅರ್ಥವಿಲ್ಲದ್ದು. 'ವಿಶಾಲ ಪ್ರತಿರೋಧ' ಘೋಷಣೆಯ ಅರ್ಥಇಷ್ಟೆ—ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆ ಹಾಗೂ ವಿಸ್ತಾರಣೆಗಾಗಿ ನಡೆಯುತ್ತಿರುವ ಹೋರಾಟಗಳನ್ನು ನಾವು ಒಪ್ಪುತ್ತೇವೆ ಮತ್ತು ಅದಕ್ಕನುಗುಣವಾಗಿ ಕಾರ್ಯತತ್ಪರರಾಗುತ್ತೇವೆ.

ಅವಳಿ ಅಪಾಯದ ಘೋಷಣೆಯನ್ನು ಪ್ರತಿಪಾದಿಸುವ ನಮ್ಮ ಟೀಕಾಕಾರರು ಈ ಹಿಂದೆ ಅವರು ಮಾಡಿದ ತಪ್ಪನ್ನೇ ಮತ್ತೆ ಮಾಡುವುದಿಲ್ಲ ಎಂದು ನಾವು ಆಶಿಸುತ್ತೇವೆ. ಸಿ.ಪಿ.ಐ.(ಎಂ) ಮಟ್ಟಿಗೆ ಹೇಳುವುದಾದರೆ ನಮಗೆ ಈ ಬಗ್ಗೆ ಯಾವ ಗೊಂದಲವೂ ಇಲ್ಲ ಹಾಗೂ ನಮ್ಮ ಕಾರ್ಯಕ್ರಮ ಹಾಗೂ ಆಚರಣೆಯಲ್ಲಿ ಯಾವ ವಿಪರ್ಯಾಸವೂ ಇಲ್ಲ. ○

ಎರಡು ನಿಮಿಷ

ಬ್ರೂನೋ ಆಪಿಟ್ಸ್

ಅನುವಾದ :

ಎಚ್. ಎಸ್. ರಾಘವೇಂದ್ರರಾವ್

(ಕಳೆದ ಸಂಚಿಕೆಯಿಂದ)

"ಗೆರ್‌ಮರ್, ಇವತ್ತು ಕ್ರಿಸ್‌ಮಸ್ ಹಬ್ಬದ ಮುನ್ನಾದಿನ."

ಅವನ ನಡೆ, ನುಡಿ, ಉಡುಪು, ವ್ಯವಹಾರ ಯಾವುದರಲ್ಲೂ ಅಧಿಕಾರ ದರ್ಪದ ಸುಳಿವೂ ಇರಲಿಲ್ಲ. ಗೆರ್‌ಮರ್ ಯಾವ ಉತ್ತರವನ್ನೂ ಕೊಡಲಿಲ್ಲ. ಅವನು ತನ್ನ ಹೆಂಡತಿ ಮತ್ತು ಮಗನ ಬಗ್ಗೆ ಯೋಚಿಸುತ್ತಿದ್ದ. ಅಷ್ಟೊಂದು ನೂರದಲ್ಲಿ...ತನಗೆ ಎಟಕದ ಹಾಗೆ... ಅಷ್ಟೊಂದು ಒಂಟಿಯಾಗಿ ಆಮೇಲೆ, ಅವನು ತನ್ನ ದೌರ್ಬಲ್ಯವನ್ನು ನುಂಗಿಕೊಂಡ. ಮಂಡಿಗಳ ಮೇಲೆ ನೆಲೆಸಿದ್ದ ಅವನ ಮುಷ್ಟಿಗಳು ಅಲ್ಲಿಯೇ ಬಿಗಿಯಾದವು.

"ಕಳೆದ ಹದಿನಾಲ್ಕು ದಿನಗಳಲ್ಲಿ, ನನಗೆ ನಿನ್ನ ಬಗ್ಗೆ ಹೊಸ ಗೌರವ ಮೂಡಿದೆ ಗೆರ್‌ಮರ್. ನೀನು ನಿಜವಾಗಿಯೂ ಗಂಡಸು, ನಾವು ನಿನ್ನಂಥವರಿಗೆ ತಲೆಬಾಗಿ ನಮಸ್ಕಾರ ಮಾಡಬೇಕು...ನನಗೆ ನಿನ್ನನ್ನು ಮನೆಗೆ ಕಳಿಸಬೇಕೂ ಅಂತ ಇಷ್ಟ...ಇವತ್ತು... ಈಗ..."

ಅವನು ಬೇಗ ಎದ್ದು ನಿಂತ. ಆಕಡೆ ಈಕಡೆ ಓಡಾಡತೊಡಗಿದ. ತನ್ನನ್ನು ತಾನೇ ಬೈದುಕೊಳ್ಳತೊಡಗಿದ. ಕೋಪದಿಂದ ನಾಟಕೀಯವಾಗಿ.

ಇದೆಲ್ಲದರ ಮನೇ ಹಾಳಾಗ! ನಾನೂ ಒಬ್ಬ ಮನುಷ್ಯ. ಮಕ್ಕಳೂ ಮರೀ ಇರೋನು. ಅದೂ ಅಲ್ಲದೆ ಕ್ರಿಸ್‌ಮಸ್ ಹಬ್ಬ ಬೇರೆ. ಬೇರೆಯವರಿಗೆ ಸ್ವಲ್ಪವಾದರೂ ಸಂತೋಷ ಕೊಡಬೇಕೂಂತ ನಮಗೂ ಆಸೇ ಇರೋದಿಲ್ವಾ? ನೀನೇ ಯೋಚನೆ ಮಾಡು ...ನಿನ್ನ ಹೆಂಡತಿ...ನಿನ್ನ ಪುಟ್ಟ ಮಗ ...ಇದ್ದಕ್ಕಿದ್ದಂತೆ ಕಾಲಿಂಗ್‌ಬೆಲ್ ಶಬ್ದ ಆಗ್ತದೆ...ನೀನು ಅಲ್ಲಿ ನಿಂತಿರ್‍ತಿ ...ದೇವರೇ...ಗೆರ್‌ಮರ್, ಆ ದೃಶ್ಯ ನನ್ನ ಕಣ್ಣ ಮುಂದೆ ಕಟ್ಟಿದೆ....ಅಬ್ಬಾ, ಅವರಿಗೆ ಎಷ್ಟು ಸಂತೋಷ ಆಗ್ಬಹುದು !'

ಗೆರ್‌ಮರ್ ಕತ್ತು ಬಾಗಿತು. ಕಣ್ಣ ಹನಿಗಳಲ್ಲಿ ಮುಳುಗಿಸಲಾಗದ ಅವನ ನೋವು ಮತ್ತೆ ಕುದಿ ಒಡೆಯಿತು. ಆದರೆ ಅವನಿಗೆ ವಸ್ತುಸ್ಥಿತಿ ಸ್ಪಷ್ಟವಾಗಿ ಗೊತ್ತಾಯಿತು. ಈ ಸಕ್ಕರೆ ಸವರಿದ ಮಾತುಗಳಲ್ಲಿ ಗುಳ್ಳೇನರಿ ಟ್ರೋಸ್ಖರ್‌ನ ಮತ್ತೊಂದು ತಂತ್ರ ಅಷ್ಟೇ. ತನ್ನ ಮನಸ್ಸನ್ನು ಮೆತ್ತಗೆ ಮಾಡಿ, ತನ್ನ ಬಾಯಿಬಿಡಿಸುವುದಕ್ಕೆ.

ಟ್ರೋಸ್ಖರ್ ನಿಧಾನವಾಗಿ ಅವನ ಹತ್ತಿರಕ್ಕೆ ಬಂದ. ಅವನ ಬೆನ್ನ ಹಿಂದೆ ನಿಂತುಕೊಂಡು ಮಾತಾಡತೊಡಗಿದ.

"ಇದರಿಂದ ಏನೂ ಪ್ರಯೋಜನ ಇಲ್ಲ ಗೆರ್‌ಮರ್, ನಿಮ್ಮ ಗುಂಪು ಪುಡಿ ಪುಡಿ ಆಗಿ ಹೋಗಿದೆ. ನಿಮ್ಮ ಜಿಲ್ಲಾ ಸಂಘಟನೆಯೊಂದಿಗೆ ನಿನ್ನ ಸಂಪರ್ಕ ಯಾರ ಮೂಲಕ ಅಂತ ನೀನು ಹೇಳದೆ ಇದ್ದರೆ, ಬೇರೆ ಯಾವುದೋ ದಾರಿಯಿಂದ ಗೊತ್ತಾಗೇ ಗೊತ್ತಾಗ್ತದೆ. ಒಂದು ನಾಲ್ಕು ದಿವಸ ಜಾಸ್ತಿ ಬೇಕಾಗ್ಬಹುದು ಅಷ್ಟೇ. ಆದರೆ ಆಯ್ತು. ನನಗೆ ಬೇಕಾದಷ್ಟು ವೇಳೆ ಇದೆ."

ಅವನು ಕ್ಷಣಕಾಲ ಸುಮ್ಮನಾದ. ಗೆರ್‌ಮರ್ ಹಾಗೆಯೇ ಕುಳಿತಿದ್ದ. ಅವನ ಮುಖದಲ್ಲಿ ಯಾವ ಭಾವನೆಯೂ ಇಲ್ಲ; ಕಣ್ಣುಗಳಲ್ಲಿ ಒಂದು ಹನಿ ನೀರಿಲ್ಲ. ಟ್ರೋಸ್ಖರ್ ನಿರೀಕ್ಷೆ ತುಂಬಿಕೊಂಡು ಕಾದ. ಆಮೇಲೆ, ಗೆರ್‌ಮರ್‌ಗೆ ಮತ್ತೆ ಅವನ ಧ್ವನಿ ಕೇಳಿಸಿತು. ಅವನ ಅಂತರಂಗವನ್ನು ಸೀಳಿ ಒಳಬಂತು.

"ನಾನು ಇದನ್ನು ತುಂಬಾ ಸರಳಗೊಳಿಸ್ತಿದ್ದೇನೆ. ನಿನಗೆ ಏನೇನೂ ಕಷ್ಟ ಇಲ್ಲ. ನೀನು ಅವನ ನಿಜವಾದ ಹೆಸರು ಹೇಳದೆ ಇದ್ದರೂ ಪರವಾಗಿಲ್ಲ. ಸಂಕೇತ ನಾಮ ಏನು ಅಂತ ಹೇಳು ಸಾಕು. ಮಿಕ್ಕಿದ್ದೆಲ್ಲಾ ನಾನೇ ನೋಡ್ಕೋತೇನೆ. ಬರೀ...ಅವನ ಸಂಕೇತ ನಾಮ ಹೇಳು ...ಗೆರ್‌ಮರ್. ಆಮೇಲೆ ನೀನು ಮನೆಗೆ ಹೋಗ್ಬಹುದು. ನಾನು ನಿನಗೆ ಭಾಷೆ ಕೊಡ್ತೇನೆ, ಈ ಕ್ಷಣ, ಈಗಲೇ ಹೋಗ್ಬಹುದು."

ಅದೆಲ್ಲಾ ಸುಳ್ಳು, ಮೋಸ, ಈ ವಿಷಯ ಗೆರ್‌ಮರ್‌ಗೆ ಗೊತ್ತು; ಚೆನ್ನಾಗಿ ಗೊತ್ತು. ಆದರೂ....ಆದರೂ ಅವನ ಮನಸ್ಸಿನಲ್ಲಿ ಏನೋ ಒಂದು ಆಸೆ. ಹೃದಯದಲ್ಲಿ ಹೋರಾಟ. ಅವನು ಯೋಚಿಸಿದ :

"ಕ್ರಿಸ್‌ಮಸ್ ಹಬ್ಬ. ಸುಮ್ಮನೆ ಹೋಗೋದು, ಕಾ ಲಿಂ ಗ್ ಬೆ ಲ್ ಒತ್ತೋದು...ನಿಜವಾದ ಹೆಸರೂ ಹೇಳಬೇಕಾಗಿಲ್ಲ...ಬರೀ ಸಂಕೇತನಾಮ ಅಷ್ಟೇ.... ಆಮೇಲೆ... ಆಮೇಲೆ...... ಮನೆಗೆ ಹೋಗೋದು,... ಬೆಲ್ ಒತ್ತೋದು... ಅವರಿಗೆಲ್ಲಾ ಎಷ್ಟು ಸಂತೋಷ. ಕಣ್ಣ ಮುಂದೆ ಕಟ್ಟಿದಂತೆ..."

ಗೆರ್‌ಮರ್ ತನಗೇ ಗೊತ್ತಿಲ್ಲದಂತೆ ಉದ್ವಿಗ್ನನಾದ. ಕೈಗಳನ್ನು ಮಂಡಿಗಳ ನಡುವೆ ಒತ್ತಿ ಹಿಡಿದ ಹಾಗಾಗುವುದನ್ನು ಅವನು ಇದಕ್ಕೆ ಮುಂಚೆ ಗಮನಿಸಿರಲಿಲ್ಲ. ಅವನು ಕುರ್ಚಿಯಿಂದ ಮೇಲೆದ್ದು ನಿಂತ. ಟ್ರೋಸ್ಖರ್‌ಗೆ ಎದುರಾಗಿ ನಿಂತ. ಟ್ರೋಸ್ಖರ್ ಕಾಲುಗಳನ್ನು ಅಗಲಿಸಿಕೊಂಡು ನಿಂತಿದ್ದ. ಅವನ ಕೈಗಳು ಕೋಟಿನ ಜೇಬಿನಲ್ಲಿದ್ದವು. ಗೆರ್‌ಮರ್ ಹೇಳಿದ :

'ನನ್ನನ್ನು ನನ್ನ ಗೂಡಿಗೆ ವಾಪಸ್ ಕಳಿಸಿ.'

ಟ್ರೋಸ್ಖರ್ ಬೇಸರಗೊಂಡವನಂತೆ ಭುಜ ಕುಣಿಸಿ ಹೇಳಿದ :

'ಬಹಳ ಶೋಚನೀಯ...'

ಕಾವಲುಗಾರರನ್ನು ಕರೆಯುವುದಕ್ಕೆ ಟ್ರೋಸ್ಖರ್ ಬಾಗಿಲ ಹತ್ತಿರ ಹೋದ. ಅ್ಟರಲ್ಲಿ ಇದ್ದಕ್ಕಿದ್ದ ಹಾಗೆ ಹಣೆ ಚಚ್ಚಿಕೊಂಡ. ಆಮೇಲೆ ಏನೋ ತಪ್ಪು ಮಾಡಿದವನಂತೆ ಹೇಳಿದ.

'ಅಯ್ಯೋ ಮರತೇ ಬಿಟ್ಟೆ. ನಿನಗೆ ಉಡುಗೊರೆ ಬೇಡವೊ? ನಿನ್ನ ಹೆಂಡತಿ ತಂದು ಕೊಟ್ಟಿದ್ದು.'

ಅವನು ಮೇಜಿನ ಹತ್ತಿರ ಹೋದ. ಆ ಪುಟ್ಟ ಅಚ್ಚುಕಟ್ಟಾದ ಪ್ಯಾಕೆಟ್ಟನ್ನು ತುಂಬಾ ಎಚ್ಚರಿಕೆಯಿಂದ ನಾಟಕೀಯವಾಗಿ ನಿಧಾನವಾಗಿ ಎತ್ತಿಕೊಂಡ.

'ನನ್ನ ಹೆಂಡತಿ ಇಲ್ಲಿಗೆ ಬಂದಿದ್ದಳೋ ?' ಉತ್ಸಾಹದಿಂದ ಗೆರ್‌ಮರ್ ಕೇಳಿದ.

ಟ್ರೋಸ್ಖರ್ ಮತ್ತೆ ಆ ಪ್ಯಾಕೆಟ್ಟನ್ನು ಮೇಜಿನ ಮೇಲೆ ಇಟ್ಟ. ನಿಧಾನವಾಗಿ, ಹುಷಾರಾಗಿ. ಆಮೇಲೆ ಉತ್ತರಕೊಟ್ಟ. ದಯೆ ತುಂಬಿದ ಧ್ವನಿಯಲ್ಲಿ.

'ಅವಳು ಇನ್ನೂ ಇಲ್ಲೇ ಇದ್ದಾಳೆ. ನಿನಗೋಸ್ಕರ ಕಾಯ್ತಾ ಇದ್ದಾಳೆ. ಅವಳು ತನ್ನ ಮಗನನ್ನೂ ಜೊತೇಲಿ ಕರ್ಕೊಂಡು ಬಂದಿದ್ದಾಳೆ. ಪುಟಾಣಿ ಹುಡುಗ, ಮುದ್ದಾಗಿದ್ದಾನೆ.'

ಗೆರ್‌ಮರ್ ಒಳಗಡೆ, ಒಂದು ಆರ್ತನಾದ ಮೈತಳೆಯಿತು. ಅವನು ಅದನ್ನು ಪ್ರಯತ್ನಪಟ್ಟು ತಡೆಹಿಡಿದ. ಭಾವನೆಗಳ ಒತ್ತಡಕ್ಕೆ ಎದೆಬಿರಿಯುವಂತಹ ಅನುಭವ. ಅವನ ಉಸಿರಾಟ ಭಾರವಾಯಿತು. ಅವನು ದೃಷ್ಟಿಹೀನನಂತೆ ಮೇಜಿನ ಕಡೆ ನಡೆದ.

'ನನ್ನ ಹೆಂಡತಿ ? ನನ್ನ ಹೆಂಡತಿ ಅಂದಿರಾ ? ಎಲ್ಲಿದ್ದಾಳೆ ಅವಳು ?'

ಟ್ರೋಸ್ಖರ್ ಮುಗುಳ್ನಕ್ಕ. ತನ್ನ ಜಾಗಕ್ಕೆ ಹೋದ. ಬ್ರೀಫ್‌ಕೇಸ್‌ನಿಂದ ಒಂದು ಕಾಗದ ತೆಗೆದ.

"ಇಗೋ, ಇದು ನಿನ್ನನ್ನು ತಕ್ಷಣ ಬಿಡುಗಡೆ ಮಾಡೋ ಅಪ್ಪಣೆ ಚೀಟಿ. ನೋಡು, ನಾನು ಅದರ ಮೇಲೆ ನನ್ನ ಸಹಿಹಾಕ್ತೇನೆ ಅಷ್ಟೇ. ಆಗೇ ಹೋಯ್ತು.'

ಹೀಗೆ ಹೇಳುತ್ತಾ, ಅವನು ಕಾಗದದ ಮೇಲೆ ರುಜು ಹಾಕಿದ. ಅವನು ಏನು ಮಾಡುತ್ತಿದ್ದ ಎಂಬುದು ಗೆರ್‌ಮರ್‌ಗೆ ಕೇವಲ ಅರ್ಥಂಬರ್ಧ ಗೊತ್ತಾಗುತ್ತಿತ್ತು.

'ಎಲ್ಲಿದ್ದಾಳೆ ಅವಳು ?' ಅವನು ಏದುಸಿರು ಬಿಡುತ್ತಾ ಕೇಳಿದ.

'ಇಲ್ಲೇ ದೊಡ್ಡ ಕಛೇರೀಲಿ ಕೂತಿದ್ದಾಳೆ.' ನಿನಗೋಸ್ಕರ ಕಾಯ್ತಿದಾಳೆ." ಟ್ರೋಸ್ಖರ್ ಲೋಕಾಭಿರಾಮವಾಗಿ ಉತ್ತರಕೊಟ್ಟ.

ಗೆರ್‌ಮರ್ ಕಣ್ಣು ಪಿಳಪಿಳ ಮಾಡಿದ.

'ಅವಳು ಇಲ್ಲಿ ಯಾಕೆ ಇಲ್ಲ?'

ಟ್ರೋಸ್ಖರ್ ಮತ್ತೆ ಮುಗುಳ್ನಕ್ಕ. ಹೆಚ್ಚು ಕಡಿಮೆ ಸ್ನೇಹ ತುಂಬಿದ ಮುಗುಳ್ನಗೆ.

'ನಾನು, ಅವಳಿಗೆ ಕ್ರಿಸ್‌ಮಸ್ ಹಬ್ಬಕ್ಕೆ, ಅವಳು ಕನಸಿನಲ್ಲೂ ಕಾಣದ ಉಡುಗೊರೆ ಕೊಡೋಣ ಅಂದ್ಕೊಂಡೆ."

ಅವನು ಮತ್ತೆ ತನ್ನ ಮೇಜು ದಾಟಿ ಗೆರ್‌ಮರ್ ಹತ್ತಿರ ಬಂದ. ಅವನಿಗೆ ಆ ಸಹಿಮಾಡಿದ ಕಾಗದ ತೋರಿಸಿದ.

"ಅದೃಷ್ಟವಂತ ನೀನು, ಅಲ್ಲವೊ ? ಆದರೂ ನೀನು ಮಾಡಬೇಕಾದ ಒಂದೇ ಒಂದು ಚಿಕ್ಕ ಕೆಲಸ ಇದೆ. ಅದು ಏನೂ ಅಂತ ನಿನಗೆ ಗೊತ್ತಲ್ಲಾ ? ಆಮೇಲೆ ನಾವಿಬ್ಬರೂ ಒಟ್ಟಾಗಿ ಮನೆಗೆ ಹೋಗ್ಬಹುದು. ನನ್ನ ಮನೆಗೆ ನಾನು, ನಿಮ್ಮ ಮನೆಗೆ ನೀನು. ಸರಿ ಗೆರ್‌ಮರ್ ಅದೊಂದು ಸಾಮಾನ್ಯ ಸಂಗತಿ ಏನು?"

ಆ ಗೆಸ್ಟಪೋ ಅಧಿಕಾರಿಯ ಕಣ್ಣುಗಳಲ್ಲಿ ಹೊಳೆಯುತ್ತಿದ್ದ ವಿಚಿತ್ರ ಬೆಳಕು ಗೆರ್‌ಮರ್‌ಗೆ ಕಾಣಿಸಿತು. ಅವನು ಇನ್ನೂ ಏದುಸಿರುಬಿಡುತ್ತಿದ್ದ. ತನ್ನ ಭಾವನೆಗಳನ್ನು ಹಿಡಿದಿಟ್ಟುಕೊಳ್ಳುವ ಕೆಲಸಕ್ಕಾಗಿ, ಅವನು ತನ್ನ ಮನೋಶಕ್ತಿಯನ್ನೆಲ್ಲ ಕೇಂದ್ರೀಕರಿಸಿದ. ತನ್ನ ಎದೆಬಡಿತದ ವೇಗ ಕಡಮೆ ಆಗುವವರೆಗೆ, ಅವುಗಳನ್ನು ಎಣಿಸಲೆತ್ನಿಸಿದ. ಕ್ರಮೇಣ ಅವನ ಮನಸ್ಸು ಒಂದು ಸ್ತಿಮಿತಕ್ಕೆ ಬಂತು. ಬಿಗಿಹಿಡಿದಿದ್ದ ಅವನ ಮುಖದ ಮಾಂಸಖಂಡಗಳು ಸಡಿಲವಾದವು. ತನ್ನ ಹಿಂಸಾಪೀಡಿತ ಮನಸ್ಸು, ಸಮಸ್ಥಿತಿಯನ್ನು ಮರಳಿ ಪಡೆದಿದೆ ಎಂದು ಅವನಿಗೆ ಖಂಡಿತವಾಯಿತು. ಆಗ ಅವನು ಶಾಂತವಾಗಿ ಕೇಳಿದ.

"ಇಲ್ಲಿಂದ ಮುಖ್ಯ ಕಛೇರಿಗೆ ಹೋಗೋದಕ್ಕೆ ಎಷ್ಟು ಹೊತ್ತು ಬೇಕು ?"

ಟ್ರೋಸ್ಖರ್‌ನ ಹುಬ್ಬುಗಳು ಮೇಲೇರಿದವು. ಯಾಕೆಂದರೆ ಈ ಪ್ರಶ್ನೆಯ ಉದ್ದೇಶ ಅವನಿಗೆ ಗೊತ್ತಾಗಲಿಲ್ಲ.

"ಎರಡು ನಿಮಿಷಾನೂ ಬೇಡ."

"ಆ ಸಂಕೇತ ನಾಮ ನಿಮಗೆ ಅಷ್ಟೊಂದು ಮುಖ್ಯಾನಾ ?"

"ಖಂಡಿತವಾಗಿ! ಇಲ್ಲದೆ ಇದ್ದರೆ, ಅದರ ಬದಲು ನಾನು ನಿನಗೆ ಸ್ವಾತಂತ್ರ್ಯ ಕೊಡ್ತಾ ಇದ್ನಾ ?"

ಈಗ ಗೆರ್‌ಮರ್ ತನ್ನ ಮೇಲೆ ಸಂಪೂರ್ಣ ಹತೋಟಿಯನ್ನು ಪಡೆದುಕೊಂಡಿದ್ದ. ಅವನು ಶಾಂತವಾಗಿ ನುಡಿದ :

"ಸರಿ ಹಾಗಾದ್ರೆ, ಇನ್ನು ಎರಡು ನಿಮಿಷಗಳಲ್ಲಿ ನಾನು ಆ ಹೆಸರು ಹೇಳ್ತೇನೆ." ಟ್ರೋಸ್ಖರ್‌ನ ಮುಖ ಅರಳಿತು.

"ಶುಭ ಕ್ರಿಸ್‌ಮಸ್, ಗೆರ್‌ಮರ್. ಸಂತೋಷಮಯ ಕ್ರಿಸ್‌ಮಸ್ ನಿನಗೆ" ಎಂದು ಉದ್ಗರಿಸಿದ ಅವನು. ಅನಂತರ ಮತ್ತೆ ತನ್ನ ಮೇಜಿನ ಕಡೆಗೆ ಓಡಿ, ಅಲ್ಲಿದ್ದ ನೋಟಪುಸ್ತಕದಿಂದ ಒಂದು ಹಾಳೆ ಹರಿದು, ಕೈಯಲ್ಲಿ ಒಂದು ಪೆನ್ಸಿಲ್ ಹಿಡಿದುಕೊಂಡು ಸಿದ್ಧವಾಗಿ ನಿಂತ.

ಗೆರ್‌ಮರ್ ಅರೆತೆರೆದ ಕಣ್ಣುಗಳಿಂದ ಅವನ ಚಲನವಲನಗಳನ್ನು ಗಮನಿಸುತ್ತಲೇ ಇದ್ದ.

"ನಾನು ನಿನಗೆ ಆ ಹೆಸರನ್ನು ಇನ್ನೆರಡು ನಿಮಿಷಗಳಲ್ಲಿ ಹೇಳ್ತೇನೆ. ಆದರೆ ಆಗ ನನ್ನ ಹೆಂಡತಿ ನನ್ನೆದುರಿಗೆ ಇರ್ಬೇಕು."

ಟ್ರೋಸ್ಖರ್ ಪೆನ್ಸಿಲನ್ನು ಜೋರಾಗಿ ಕೆಳಗಡೆ ಎಸೆದ. ಅವನ ಕುತಂತ್ರ ಬಯಲಾಗಿತ್ತು.

ಅವನು ಗೆರ್‌ಮರ್ ಕಡೆ, ಬಿಟ್ಟ ಕಣ್ಣು ಮುಚ್ಚದೆ ನೋಡಿದ. ಗೆರ್‌ಮರ್‌ಗಾದರೋ ಮುಗುಳು ನಗೆಯನ್ನು ತಡೆಹಿಡಿಯಲಾಗಲಿಲ್ಲ.

ಟ್ರೋಸ್ಖರ್ ತೊದಲುತ್ತ ಹೇಳಿದ :

"ಅದೆಲ್ಲ ಆಗೋದಿಲ್ಲ ಕಣಯ್ಯ."

ಆದರೆ ಟ್ರೋಸ್ಖರ್ ತನ್ನನ್ನು ತಡೆಯುವುದರೊಳಗಾಗಿ ಗೆರ್‌ಮರ್ ಮುಂದೆ ಬಾಗಿ, ಆ ಪ್ಯಾಕೆಟ್ ಅನ್ನು ಎಳೆದುಕೊಂಡ. ಅದು ಹಕ್ಕಿ ಗರಿಯ ಹಾಗೆ ಹಗುರವಾಗಿತ್ತು. ಅವನು ಅದನ್ನು ಹರಿದು ತೆಗೆದ. ಅದರೊಳಗಿದ್ದದ್ದು ಒಂದು ಖಾಲೀ ಚಾಕೊಲೆಟ್ ಪೊಟ್ಟಣ.

ಟ್ರೋಸ್ಖರ್ ಹುಬ್ಬುಗಂಟಿಕ್ಕಿದ. ಅವನು ತನ್ನ ಮೇಜಿನ ಮೇಲಿನ ಬಟನ್ ಒತ್ತಿದ. ತಕ್ಷಣ ಕಾವಲುಗಾರ ಪ್ರತ್ಯಕ್ಷನಾದ. ಟ್ರೋಸ್ಖರ್ ದಾಪುಗಾಲು ಹಾಕಿ ಒಂದೇ ಹೆಜ್ಜೆಯಲ್ಲಿ ಗೆರ್‌ಮರ್ ಎದುರಿಗೆ ಹೋಗಿ ನಿಂತ.

''ಹಂದಿ !" ಎಂದು ಚೀರಿದ, ಟ್ರೋಸ್ಖರ್. ಬಳಿಕ ನಸುನಗುತ್ತಿದ್ದ ಗೆರ್‌ಮರ್‌ನ ಬಾಯ ಮೇಲೆ ಬಲವಾಗಿ ಹೊಡೆದ. ಅವನ ಅಂಗಿಯ ತೋಳ ಮೇಲೆ ಒಂದು ಹನಿ ರಕ್ತ ಬಿತ್ತು.

''ಈ ಹಂದೀನ ಇಲ್ಲಿಂದ ಕರ್ಕೊಂಡು ಹೋಗು" ಅವನ ಧ್ವನಿ ಗುಡುಗಿತು. ಅವನು ಕಾವಲುಗಾರನ ಕಡೆ ತಿರುಗಿದ.

ಕಬ್ಬಿಣದ ಮೆಟ್ಟಲುಗಳನ್ನು ಹತ್ತಿ ಗೆರ್‌ಮರ್ ತನ್ನ ಗೂಡಿಗೆ ಹಿಂದಿರುಗುವ ವೇಳೆಗೆ ಸೆರೆಯಾಳುಗಳೆಲ್ಲ ಮಲಗಿದ್ದರು. ಮೌನ ಮತ್ತಷ್ಟು ಗಂಭೀರವಾಗಿತ್ತು. ಕಾವಲುಗಾರ ಅವನನ್ನು ಒಳಗೆ ತಳ್ಳಿ ಬೀಗ ಹಾಕಿದ.

ಗೂಡಿನ ತುಂಬಾ ಕಗ್ಗತ್ತಲು. ಗೆರ್‌ಮರ್, ಕೋಣೆಯ ಮಧ್ಯೆ ನಿಂತು ಒಂದೆರಡು ಬಾರಿ ಉಸಿರಾಡಿದ. ಅವನ ಚೈತನ್ಯದ ಕೊನೆಯ ಹನಿಗಳು ನಿಧಾನವಾಗಿ ಸೋರಿಹೋದವು. ನಿತ್ರಾಣನಾದ ಅವನು ಮತ್ತೆ ಗೋಡೆಗೆ ಹಣೆಯೂರಿದ. ಕಣ್ಣುಗಳನ್ನು ಮುಚ್ಚಿಕೊಂಡ. ಆದರೆ ಅಳಲಿಲ್ಲ.

"ನಾನು ಮನೆಗೆ ಬರಲಾಗೋದಿಲ್ಲ ...ನನ್ನ ಮೇಲೆ ಸಿಟ್ಟಾಗಬೇಡ..." ಅವನು ತನ್ನೊಳಗಿನಿಂದ ಉಕ್ಕಿ ಉಕ್ಕಿ ಬರುತ್ತಿದ್ದ ಕತ್ತಲೆಗೆ ಪಿಸು ಗುಟ್ಟಿದ.

ಎಲ್ಲೋ ದೂರದಲ್ಲಿ ಟ್ರಾಮ್‌ಗಾಡಿಯೊಂದು ತನ್ನ ಹಳಿಗಳ ಮೇಲೆ ಹರಿದು ಹೋಗುವ ಶಬ್ದ, ಬಹಳ ಮೆಲ್ಲಗೆ ಕೇಳಬರುತ್ತಿತ್ತು. ೦

ಬೀಡಿ ಕಾರ್ಮಿಕರ 'ಎಲೆ ಎವರೇಜ್'ನ ದುಷ್ಟ ಪದ್ಧತಿ ತೊಲಗಲಿ

—ಕಾಂ। ಸಿ. ಕಣ್ಣನ್

(3ನೇ ಪುಟದಿಂದ)

ಬೀಡಿ ತಯಾರಕರು ತಮಗೆ ಬೇಕಾದ ಬೀಡಿ ಎಲೆಗಳನ್ನು ಮಧ್ಯ ಪ್ರದೇಶದಿಂದ ತರಿಸುತ್ತಾರೆ. ವಾಹನಗಳಲ್ಲಿ ಆ ಎಲೆಗಳನ್ನು ತರುವಾಗ ಅಕಸ್ಮಾತ್ ಮಳೆ ಬಂದರೆ ಆ ಎಲೆಗಳು ಹಾಳಾಗುತ್ತವೆ. ಇದರ ನಷ್ಟವನ್ನು ಬೀಡಿ ಕಟ್ಟುವ ಕಾರ್ಮಿಕರ ಮೇಲೆ 'ಎವರೇಜ್'ನ ರೂಪದಲ್ಲಿ ಹೇರಿ ಮಾಲಿಕರು ನಿಶ್ಚಿಂತರಾಗಿರುತ್ತಾರೆ. ಜಗತ್ತಿನ ಯಾವುದೇ ರಾಷ್ಟ್ರದಲ್ಲೂ ಯಾವುದೇ ಕೈಗಾರಿಕೆಯಲ್ಲೂ ಈ ರೀತಿಯ ಕ್ರೂರ ಶೋಷಣೆಯ ಪದ್ಧತಿ ಇಲ್ಲ. ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್ನಿನ 4ನೇ ಸಮ್ಮೇಳನದ ಅಂಗವಾಗಿ ಬಂಟ್ವಾಳದಲ್ಲಿ ನಡೆದ ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತಾ ಅಖಿಲ ಭಾರತ ಬೀಡಿ ಕಾರ್ಮಿಕರ ಫೆಡರೇಶನ್ನಿನ ಪ್ರಧಾನ ಕಾರ್ಯದರ್ಶಿ ಕಾಂ। ಸಿ. ಕಣ್ಣನ್ ಅವರು ಈ ಮಾತುಗಳನ್ನು ಹೇಳಿದರು. ಮಾಲಿಕರ ಮತ್ತು ಬೀಡಿ ಕಾರ್ಮಿಕರ ಮಧ್ಯದಲ್ಲಿ, ಮಧ್ಯವರ್ತಿಗಳಾಗಿರುವ ಕಂಟ್ರಾಕ್ಟರರು ಕಾರ್ಮಿಕರಿಗೆ ಮಾಡುತ್ತಿರುವ ವಂಚನೆಗಳನ್ನೂ, ಅನ್ಯಾಯಗಳನ್ನೂ ವಿವರಿಸಿದ ಕಾಂ। ಕಣ್ಣನ್, ಕಂಟ್ರಾಕ್ಟ್ ಪದ್ಧತಿಯ ನಿರ್ಮೂಲನಕ್ಕಾಗಿ ತೀವ್ರ ಹೋರಾಟ ನಡೆಸಲು ಕಾರ್ಮಿಕರಿಗೆ ಕರೆ ನೀಡಿದರು.

ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಸಂಚಾಲಕಿ ಕಾಂ। ವಿಮಲಾ ರಣದಿವೆಯವರು ಮಾತನಾಡುತ್ತಾ, ಪಶ್ಚಿಮ ಬಂಗಾಳ, ತ್ರಿಪುರಾ ಮತ್ತು ಕೇರಳದ ಕಾರ್ಮಿಕರಂತೆ ಕರ್ನಾಟಕದ ಕಾರ್ಮಿಕರೂ ವರ್ಗ ಪ್ರಜ್ಞೆ ಬೆಳೆಸಿಕೊಂಡು, ಎಡ ಪ್ರಜಾಪ್ರಭುತ್ವ ಶಕ್ತಿಗಳ ನೇತೃತ್ವದಲ್ಲಿ ಕಾರ್ಮಿಕರ ಹಿತರಕ್ಷಣೆ ಮಾಡುವ ಬದಲಿ ರಾಜಕೀಯ ವ್ಯವಸ್ಥೆಯನ್ನು ತರಲು ಶ್ರಮಿಸಬೇಕೆಂದು ಕರೆ ನೀಡಿದರು.

ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನಿನ ಅಧ್ಯಕ್ಷರಾದ ಕಾಂ। ಎಸ್. ಸೂರ್ಯನಾರಾಯಣರಾವ್, ಪ್ರಧಾನ ಕಾರ್ಯದರ್ಶಿ ಕಾಂ। ಮಹಮದ್ ದಸ್ತಗಿರ್, ಕುಣಿಗಲ್ಲಿನ ಮಹಿಳಾ ಮುಂದಾಳು ಕಾಂ। ಸಲಿಮಾ ಬೇಗಂ ಮತ್ತು ಹರಿಹರದ ಕಾಂ।ಮೆಹರೂನ್‌ಬಿ ಭಾಷಣ ಮಾಡಿದರು. ಸಮ್ಮೇಳನದ ತೀರ್ಮಾನಗಳನ್ನು ಕಾಂ। ಕೆ. ಆರ್. ಶ್ರೀಯಾನ್ ವಿವರಿಸಿದರು.

ಕಾಂ। ಪಿ. ರಾಮಚಂದ್ರರಾಯರು ಅಧ್ಯಕ್ಷತೆ ವಹಿಸಿದ್ದರು. ಅರಂಭದಲ್ಲಿ ಸ್ವಾಗತಿಸಿದ ಕಾಂ। ಬಿ. ವಾಸು ಗಟ್ಟಿಯವರು ಕೊನೆಯಲ್ಲಿ ವಂದನಾರ್ಪಣೆ ಮಾಡಿದರು.

ಸಭೆಗೆ ಮೊದಲು, ದಕ್ಷಿಣ ಕನ್ನಡ ಜಿಲ್ಲೆಯ ದೂರ ದೂರದ ಭಾಗಗಳಿಂದ ನಡೆದುಕೊಂಡೇ ಬಂದ ಹತ್ತು ಸಾವಿರ ದಷ್ಟು ಕಾರ್ಮಿಕರು, ಬಂಟ್ವಾಳದ ಮುಖ್ಯ ರಸ್ತೆಗಳ ಮೂಲಕ ನಡೆಸಿದ ಮೆರವಣಿಗೆಯು ಬಂಟ್ವಾಳದಲ್ಲಿ ಒಂದು ಚಾರಿತ್ರಿಕ ಪ್ರದರ್ಶನವಾಗಿತ್ತು.

ಸಭೆಯ ನಂತರ ಸಾಂಸ್ಕೃತಿಕ ಕಾರ್ಯಕ್ರಮವಿತ್ತು.

ವರದಿ—ಬಿ. ಮಾದವ

ತೀವ್ರ ಹೋರಾಟಗಳು

(2ನೇ ಪುಟದಿಂದ)

ಇತ್ಯರ್ಥಕ್ಕೆ ಮಾಲೀಕರು ಮುಂದೆ ಬರಬೇಕೆಂದು ನಾವು ಈ ಮೂಲಕ ಒತ್ತಾಯಿಸುತ್ತೇವೆ. ಕಾರ್ಮಿಕರ ತಾಳ್ಮೆಯನ್ನು ಪರೀಕ್ಷಿಸಬಾರದೆಂದೂ ವಿನಂತಿಸುತ್ತೇವೆ.

* * * *

ನಾನು ಯಾರನ್ನೂ ದ್ವೇಷಿಸುವುದಿಲ್ಲ;
ನಾನು ಯಾರನ್ನೂ ದೋಚುವುದಿಲ್ಲ;
ಆದರೆ,
ಜಾಗರೂಕರಾಗಿರಿ...
ನಾನು ಹಸಿದಿರುವಾಗ—
ನನ್ನನ್ನು ಕೊಳ್ಳೆ ಹೊಡೆದವರ ಮಾಂಸ ತಿನ್ನುತ್ತೇನೆ—
ನನ್ನ ಹಸಿವೆಯ ಬಗ್ಗೆ—ಜಾಗ್ರತೆಯಿಂದಿರಿ.
ಜಾಗ್ರತೆಯಿಂದಿರಿ—ನನ್ನ ಸಿಟ್ಟಿನ ಬಗ್ಗೆ.

—ಮುಹಮ್ಮದ್ ದರ್‌ವೀಶ್.

ಎ. ಸಿ. ಯವರ ದೌರ್ಜನ್ಯ ವಿರೋಧಿಸಿ ಪ್ರತಿಭಟನಾ ಪ್ರದರ್ಶನ

19-4-82 ರಂದು ಕೋಲಾರದಲ್ಲಿ ಸುತ್ತಮುತ್ತಲಿನ ಪ್ರದೇಶಗಳಿಂದ ಆಗಮಿಸಿದ ನೂರಾರು ರೈತರು ಚಿಕ್ಕಬಳ್ಳಾಪುರದ ಅಸಿಸ್ಟೆಂಟ್ ಕಮೀಷನರ್‌ರ ಉದ್ಧಟತನ ಪ್ರತಿಭಟಿಸಿ ನಗರದಲ್ಲಿದ್ದ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಜಿಲ್ಲಾಧಿಕಾರಿ ಕಚೇರಿ ಎದರು ಮತಪ್ರದರ್ಶನ ನಡೆಸಿದರು.

ಚಿಕ್ಕಬಳ್ಳಾಪುರದಲ್ಲಿ ಕಾಂ। ಲಕ್ಷ್ಮಯ್ಯ ಮತ್ತಿತರರ ಮೇಲೆ ದೌರ್ಜನ್ಯ ನಡೆಸಿದ ಅಸಿಸ್ಟೆಂಟ್ ಕಮೀಷನರ್‌ರಾದ ಕೊಂಗವಾಡ ಅವರನ್ನು ವಜಾ ಮಾಡುವಂತೆ ಒತ್ತಾಯಿಸುವ ಘೋಷಣೆ ಕೂಗತ್ತಾ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಿತು.

ಹಿನ್ನೆಲೆ :

5-4-82 ರಂದು ಪ್ರಾಂತ ರೈತ ಸಂಘವು ರಾಜ್ಯದಾದ್ಯಂತ ಪ್ರತಿಭಟನಾ ದಿನ ನಡೆಸಲು ಕರೆಕೊಟ್ಟಿತ್ತು. ಈ ಮೇರೆಗೆ ಚಿಕ್ಕಬಳ್ಳಾಪುರದಲ್ಲಿ ಪ್ರಾಂತ ರೈತ ಸಂಘದ ಉಪಾಧ್ಯಕ್ಷ ಕಾಂ। ಲಕ್ಷ್ಮಯ್ಯನವರ ನೇತೃತ್ವದಲ್ಲಿ ನೂರಾರು ರೈತರು ಎ. ಸಿ. ಆಫೀಸೆದುರು ಮತಪ್ರದರ್ಶನ ನಡೆಸಲಾಗಿತ್ತು. ಮತಪ್ರದರ್ಶನಕಾರರ ಮನವಿ ಸ್ವೀಕರಿಸುವ ಗೊಡವೆಗೆ ಹೋಗದೇ ಅಸಿಸ್ಟೆಂಟ್ ಕಮೀಷನರ್ ಕೊಂಗವಾಡ ಅವರು ಕಾಂ। ಲಕ್ಷ್ಮಯ್ಯನವರ ಕೊರಳ ಪಟ್ಟಿ ಹಿಡಿದು ಕೋರ್ಟ್ ಆವರಣದಲ್ಲಿ ಅತಿಕ್ರಮ ಪ್ರವೇಶ ಮಾಡಿದ್ದೀಯ ಎಂದು ಬೆದರಿಸಿದ್ದೇ ಅಲ್ಲದೇ ಪೋಲಿಸರನ್ನು ಕರೆಸಿ ಕಾಂ। ಲಕ್ಷ್ಮಯ್ಯ, ಶಿವಪ್ಪ, ಕಾಂತರಾಜ, ಆಂತೋಣಿ ಮುಂತಾದವರನ್ನು ಬಂಧಿಸಲು ತಿಳಿಸಿದರು. ಅಷ್ಟಕ್ಕೇ ನಿಲ್ಲದೇ 200 ರೂ. ದಂಡವನ್ನು ವಿಧಿಸಿದ್ದರು. ಕಾಂ। ಲಕ್ಷ್ಮಯ್ಯ ದಂಡಕೊಡಲು ನಿರಾಕರಿಸಿದ ಮೇಲೆ ಅವರನ್ನು ನ್ಯಾಯಾಂಗ ಕಸ್ಟಡಿಗೆ ಒಪ್ಪಿಸಲಾಗಿತ್ತು.

ಎ.ಸಿ.ಯ ಉದ್ಧಟತನ ಪ್ರತಿಭಟಿಸಿ 19-4-82 ರಂದು ಕೋಲಾರದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದರು ಮತಪ್ರದರ್ಶನ, ಬಹಿರಂಗ ಸಭೆ ಏರ್ಪಡಿಸಲಾಗಿತ್ತು. ಕಚೇರಿ ಎದರು ನೆರೆದಿದ್ದ ಪ್ರದರ್ಶನಕಾರರನ್ನು ವಿಶೇಷ ಜಿಲ್ಲಾಧಿಕಾರಿಗಳು ಭೇಟಿ ಮಾಡಿ, ಈ ಪ್ರಕರಣ ಕುರಿತು ತಮ್ಮನ್ನು ಸರಕಾರ ತನಿಖಾಧಿಕಾರಿಯಾಗಿ ನಿಯಮಿಸಿರುವದನ್ನು ತಿಳಿಸಿ, ತಾವು ನ್ಯಾಯ ದೊರಕಿಸಿ ಕೊಡಲು ಪ್ರಯತ್ನಿಸುವ ಆಶ್ವಾಸನೆ ನೀಡಿದರು.

ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ। ಆರ್. ವೆಂಕಟ್ರಾಮಯ್ಯ, ಲಕ್ಷ್ಮಣರೆಡ್ಡಿ, ಅಪ್ಪುಸ್ವಾಮಿ ರೆಡ್ಡಿ, ಅಶ್ವಥನಾರಾಯಣರೆಡ್ಡಿ, ಜಿ. ದೊರೆಸ್ವಾಮಿ, ಮಜೀದ್ ಮೊದಲಾದವರೆಲ್ಲ ಮಾತನಾಡಿ. ತೀವ್ರ ತನಿಖೆ ನಡೆಸದಿದ್ದಲ್ಲಿ, ತೀವ್ರಪರಿಣಾಮ ಎದುರಿಸಬೇಕಾದಿತೆಂದು ಎಚ್ಚರಿಸಿದರು. ●

ಹಸಿದ ಕಣ್ಗಳಿಂದ

ಬೆಂಗಳೂರಿನ ಬೀದಿಗಳಲ್ಲಿ ಕಾಂಗ್ರೈ ಗೂಂಡಾಗಳ ಗಲಭೆ

ಬೆಂಗಳೂರಿನ ಬೀದಿ, ಗಲ್ಲಿ, ಮಾರಗಳಲ್ಲಿ, ಎಲ್ಲೆಂದರಲ್ಲಿ ಕಾಂಗ್ರೈ ರಾಜಕುಮಾರರು ಚೂರಿ, ಚಾಕುಗಳೊಂದಿಗೆ ನರಬೇಟೆಯಾಡಲು ಪ್ರಯತ್ನಿಸುತ್ತಿದ್ದಾರೆ. ಹುಟ್ಟು ರೌಡಿಗುಣದ ಈ ರಾಜಕುಮಾರರಿಗೆ ಕಾಂಗ್ರೈನ ಮೂರ್ಖ ಮಂತ್ರಿ-ಶಾಸಕರ ಬೆಂಬಲ ದೊರೆಯುತ್ತಿದೆ.

ಇದಕ್ಕೆ ಕಳೆದವಾರ ಬೆಂಗಳೂರಿನ ಬಡಾವಣೆಗಳಲ್ಲಿ ನಡೆದ ಹಿಂಸಾಚಾರ, ಗಲಭೆ ಒಂದು ಸ್ಪಷ್ಟ ಉದಾಹರಣೆ. ಕಳೆದ ಮೇ ಮೂರರ ಸಂಜೆ, ಅಂದರೆ 7-15 ರಿಂದ 8-30ರ ವರೆಗೆ ನಾಲ್ಕೈದು ಜನರ ಒಂದು ಗುಂಪು ಮಲ್ಲೇಶ್ವರಂನ 8ನೇ ಕ್ರಾಸ್‌ನಿಂದ ಹಿಡಿದು ಸ್ಪೈಪ್ ಲೈನ್‌ವರೆಗೆ ಜನ ನಿಬಿಡ ರಸ್ತೆಗಳಲ್ಲಿ ಚಾಕು, ಚೂರಿ ಹಿಡಿದು ದಾರಿಯಲ್ಲಿ ಕಂಡವರಿಗೆ ಗಾಯಗೊಳಿಸಿ ಹಣ ಕಿತ್ತುಕೊಂಡರು. ಹೊಟೆಲ್ಲುಗಳಿಗೆ ನುಗ್ಗಿ ಅಲ್ಲಿದ್ದವರನ್ನೆಲ್ಲ ಹೆದರಿಸಿ ಲೂಟಿ ಮಾಡಿದರು. ಆ ಒಂದು ಘಳಿಗೆಯಲ್ಲಿ ಇಡೀ ಆ ಬಡಾವಣೆಯ ಜನ ತತ್ತರಿಸಿ ಹೋದರು. ಆದರೂ ಪೋಲೀಸರ ಸುಳಿವಿಲ್ಲ. ಜನಕ್ಕೆಲ್ಲ ಗೊತ್ತು (!) ಆ ಗೂಂಡಾಗಳು ಯಾರೆಂದು. "ಎಫ್. ಎಮ್. ಖಾನ್‌ರ ಮರಿ ಶಿಷ್ಯ ವೃಂದ." ತಮ್ಮ ಸಾಹಸ ತೋರಿಸಿಯೇ ಬಿಟ್ಟರು.

ಈಗ ನಾವು ತೀವ್ರವಾಗಿ ಆಲೋಚಿಸಬೇಕಾಗಿದೆ. ನಾವು ಇಂಥ ಉಸಿರುಗಟ್ಟುವ ವಾತಾವರಣದಲ್ಲಿ ಬದುಕುವುದು ಹೇಗೆಂದು. ಸಾಮಾನ್ಯರನ್ನು ಸಮಾಧಿಮಾಡಿ ಅವರ ಗೋರಿಯ ಮೇಲೆ ತಮ್ಮ ಸಿಂಹಾಸನವನ್ನು ಅಲಂಕರಿಸುವ ಜನರ ಬಗ್ಗೆ ಇನ್ನು ಮುಂದಾದರೂ ಎಚ್ಚರ ವಹಿಸದಿದ್ದರೆ, ಈ ರೌಡೀಸಂ ಸರ್ಕಾರದ ನಿತ್ಯ ನೋವನ್ನು ನಾವು ಹಗಲೇಂಸಿಕೊಳ್ಳಬೇಕಾಗುತ್ತದೆ.

ಖಲಿಸ್ತಾನ ಖಲೀಫರು :

ಭಾರತದ ಕರಿ ನೆಲದ ಮಣ್ಣು ಕೆಂಪಾಗುತ್ತಿದೆ. ಜೊತೆ-ಜೊತೆಗೆ ಈ ಭೂಮಿ ಬಿರುಕುಬಿಡುತ್ತಿದೆ. ಭವ್ಯ (!) ಭಾರತದ ನೆಲವನ್ನು ತುಕಡಾ-ತುಕಡಾ ಮಾಡಲು ಆರ್.ಎಸ್.ಎಸ್, ಜನಸಂಘ, ದಲ್‌ಖಾಲ್ಸಾ ಮುಂತಾದ ಕೋಮುವಾದಿ ಗುಂಪುಗಳು ಟೊಂಕಕಟ್ಟಿ ನಿಲ್ಲುತ್ತಿವೆ.

ಈ ಮಾತಿಗೆ ಉದಾಹರಣೆ ಬೇಕಿಲ್ಲ. ಜಾತೀಯ ಹೆಸರಿನಲ್ಲಿ ಆರ್.ಎಸ್.ಎಸ್.ನಂತಹ ಕೋಮುವಾದಿಗಳು ಮಾಡಿದ ಗೊಂದಲಗಳಿಗೆ ಮಿತಿಯಿಲ್ಲ.

ಆದರೆ ಇತ್ತೀಚೆಗೆ ಪಂಜಾಬಿನಲ್ಲಿ ದಲ್‌ಖಾಲ್ಸಾ ಎಬ್ಬಿಸಿರುವ ಗೊಂದಲ ವಿಪಂಚನೆಗೆ ಈಡು ಮಾಡುವಂಥಹದು. ಈ ಗುಂಪಿನ ಉಗ್ರವಾದೀ ಶಿಖ್ಖರು ಖಲಿಸ್ತಾನ್ ಕೂಗನ್ನೆಬ್ಬಿಸಿದ್ದಾರೆ. ಅಮೇರಿಕಾದ ಸಿ. ಐ. ಎ. ಏಜೆಂಟರು ಇದಕ್ಕೆ ಪ್ರೇರೇಪಿಸುತ್ತಿದ್ದಾರೆ. ಲೆಕ್ಕ ಹಾಕಿ, ಇಂತಹ ಕೋಮುವಾದಿಗಳಿಂದ ಎಂತಹ ಭಾರತ ರೂಪುಗೊಳ್ಳಬಹುದು ಎಂದು.

ಹೊಳಲ್ಕೆರೆಯಲ್ಲಿ ಚಡ್ಡಿಗಳ ಮಾರ್ಚ್

ಚಿತ್ರದುರ್ಗದ ಹೊಳಲ್ಕೆರೆಯಲ್ಲಿ ಮತ್ತೆ ಈಗ ಕೋಮು ಗಲಭೆ ಎದ್ದಿದೆ. ಯಾವುದೋ ಒಂದು ಸಣ್ಣ ಕಾರಣಕ್ಕೆ ಆದ ಗಲಭೆಯನ್ನು ಆರ್.ಎಸ್.ಎಸ್.ನಂತಹ ಮತೀಯ ಶಕ್ತಿಗಳು ತೆರೆಮರೆ ನಿಂತು ಏನೂ ಅರಿಯದ ಸಾಮಾನ್ಯರಲ್ಲಿ ಜಾತೀಯ ಜಗಳ ಬಿತ್ತುತ್ತಿದ್ದಾರೆ. ಬದುಕೇ ಭಾರವಾದ ಬಡ ಜನರನ್ನು ಈ ಕೋಮುವಾದಿಗಳು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ನಮ್ಮ ಘನ ಸರ್ಕಾರ ಇನ್ನಾದರೂ ತಿಳಿಯಬೇಕು, ಗಲಭೆಯಾದ ತಕ್ಷಣ ಲಾಠಿಚಾರ್ಜ್ ಮಾಡುವ ಮೊದಲು ಈ ಚಡ್ಡಿ ಭೂಪರನ್ನು ಸರಿಯಾಗಿ ವಿಚಾರಿಸಿಕೊಳ್ಳಬೇಕು ಎಂದು.

ತಿಮ್ಮಪ್ಪನ ಲಡ್ಡು !

ಒಂದು ಕಥೆಯಿದೆ. ತಿರುಪತಿ ತಿಮ್ಮಪ್ಪ ತನ್ನ ಮಾವನಿಗೆ ಕೊಡಬೇಕಾದ ಸಾಲ ಇನ್ನೂ ತೀರಿಸಿಲ್ಲವಂತೆ. ಅದಕ್ಕಾಗಿ ತಿರುಪತಿ ಗುಡ್ಡದ ಮೇಲೆ ನಿಂತ ಈ ತಿರುಪತಿ ತಿಮ್ಮಪ್ಪನಿಗೆ ಸಹಾಯ ಮಾಡಲು ಪಾಪದ ಹಣ ಅವನ ಹುಂಡಿಗೆಗೆ ಸುರಿಯಲು ಜನ ಕ್ಯೂ ಹಚ್ಚಿ ನಿಲ್ಲುತ್ತಾರೆ. ಭಾರತದಲ್ಲಿ ಟಾಟಾ ಬಿರ್ಲಾನಂತೆ ಅತೀ ದೊಡ್ಡ ಶ್ರೀಮಂತ ದೇವರು ತಿರುಪತಿ ತಿಮ್ಮಪ್ಪನಾದರೂ, ಇನ್ನೂ ಕಡುಬಡವನಂತೆ ! ಹಾಗಾಗಿ ಈ ತಿಂಗಳಿಂದ ಭಕ್ತಾದಿಗಳಿಗೆ ಹಂಚುವ ತಿರುಪತಿ ತಿಮ್ಮಪ್ಪನ ಲಡ್ಡೂ ಬೆಲೆ ಗಗನಕ್ಕೇರಿದೆ.

—ನಾಗ್‌ಕಲಾಲ್

ರಾಜ್ಯದಾದ್ಯಂತ ಸಂಭ್ರಮದ ಮೇ ದಿನಾಚರಣೆ

(ಒಂದನೇ ಪುಟದಿಂದ)

ಕಾಂ। ಎಂ. ಎಸ್. ಉಗ್ರಪ್ಪ ಹಾಗೂ ಕಾಂ। ಮೋಹನ್‌ಕುಮಾರ್ ಎ.ಐ.ಟಿ.ಯು.ಸಿ. ಯ ಕಾಂ। ಸೋಮಸುಂದರ ಶರ್ಮ ಹಾಗೂ ಕಾಂ। ವೆಂಕಟರಾಮಯ್ಯ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಮೇ ದಿನಾಚರಣೆಯ ಅಂಗವಾಗಿ ನಡೆಸಲಾದ ವಿವಿಧ ಆಟೋಟ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ರಾಜ್ಯ ಎ.ಐ.ಟಿ.ಯು.ಸಿ. ಕಾರ್ಯದರ್ಶಿ ಕಾಂ। ಶ್ಯಾಮಸುಂದರ್ ಬಹುಮಾನ ವಿತರಣೆ ಮಾಡಿದರು.

ಉಡುಪಿ :

ದ. ಕ. ಜಿಲ್ಲೆಯ ಉಡುಪಿಯಲ್ಲಿ ವಿವಿಧ ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಮೇ ದಿನಾಚರಣೆಯನ್ನಾಚರಿಸಲಾಯಿತು.

ಕಾರ್ಮಿಕರ ಬೃಹತ್ ಮೆರವಣಿಗೆ ಹೊರಟು ನಗರದಲ್ಲಿ ವರ್ಣರಂಜಿತ ಪ್ರದರ್ಶನ ನಡೆಸಿದ ನಂತರ ರಥಬೀದಿಯಲ್ಲಿ ಬಹಿರಂಗಸಭೆ ನಡೆಯಿತು. ಅಧ್ಯಕ್ಷತೆಯನ್ನು ಶಿರ್ತಾಡಿ ವಿಲಿಯಂ ಪಿಂಟೋ ವಹಿಸಿದ್ದರು. ಆರಂಭದಲ್ಲಿ ಮೋನಪ್ಪಸಾಲಿಯಾನ್ ಸ್ವಾಗತಿಸಿದರು.

ಸಭೆಯನ್ನುದ್ದೇಶಿಸಿ ಸಿಂಡಿಕೇಟ್ ಬ್ಯಾಂಕ್ ಯೂನಿಯನ್ನಿನ ಪರವಾಗಿ ಕಾಂ। ಎಂ. ಆರ್. ಆಚಾರ್, ವಿಜಯಾ ಬ್ಯಾಂಕಿನ ನೌಕರರ ಪರವಾಗಿ ಕಾಂ। ಸುಧಾಕರಶೆಟ್ಟಿ, ಬಾಡಿಗೆದಾರರ ಸಂಘದ ಬಿ. ರಾಮಚಂದ್ರಭಟ್, ಕೆ. ಇ. ಬಿ. ಮೆಂಟೆನೆನ್ಸ್ ನೌಕರರ ಸಂಘದ ಕಾಂ। ಶ್ರೀನಿವಾಸಸೆಟ್ಟಿಗಾರ್, ಎ.ಐ.ಟಿ.ಯು.ಸಿ. ಪರವಾಗಿ ಕಾಂ। ಕೆ. ಶಂಕರ ಸೆಟ್ಟಿಗಾರ್, ಸಿ.ಐ.ಟಿ.ಯು ಪರವಾಗಿ ಕಾಂ। ಡೇವಿಡ್ ಕರ್ಕಡ್ ಅವರುಗಳು ಸಭೆಯನ್ನುದ್ದೇಶಿಸಿ ಮಾತನಾಡಿ ಮೇ ದಿನದ ಮಹತ್ವ, ಕಾರ್ಮಿಕ ವರ್ಗದ ಜವಾಬ್ದಾರಿಯ ಕುರಿತು ವಿವರಿಸಿದರು.

ಕೊನೆಯಲ್ಲಿ ಕಾಂ॥ ಎನ್. ಸಾಧು ಅಮೀನ್ ವಂದನೆ ಸಲ್ಲಿಸಿದರು.

ಕುಂದಾಪುರ :

1-5-82 ರಂದು ಕುಂದಾಪುರದಲ್ಲಿ ಸಿ. ಐ. ಟಿ. ಯು. ಗೆ ಸೇರಿದ ಎಲ್ಲಾ ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಮೇ ದಿನವನ್ನು ಭಾರೀ ವಿಜೃಂಭಣೆಯಿಂದ ಆಚರಿಸಲಾಯಿತು. ಸ್ವಯಂ ಸೇವಕರ ಪಥಚಲನವು ವಿಶೇಷ ಆಕರ್ಷಣೀಯವಾಗಿತ್ತು.

ಕುಂದಾಪುರ ಗಾಂಧೀ ಮೈದಾನದಲ್ಲಿ ಸಂಜೆ ಬಹಿರಂಗಸಭೆ ನಡೆಯಿತು. ಸಭೆಗೆ ಮುನ್ನ ನಡೆದ ಬೃಹತ್ ಮೆರವಣಿಗೆಯಲ್ಲಿ ರೈತ-ಕೃಷೀ ಕೂಲಿಗಾರರು, ಹೆಂಚಿನ ಕೆಲಸಗಾರರು, ಯುವಜನರು ಮತ್ತು ಬಾಲಕ-ಬಾಲಕಿಯರು ಪಾಲ್ಗೊಂಡಿದ್ದರು. ಆರಂಭದಲ್ಲಿ ಕಾಂ। ಸಿ. ನಾರಾಯಣ ಸ್ವಾಗತಿಸಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ॥ ಅಬ್ರಹಾಂ ಕರ್ಕಡ್ ವಹಿಸಿದ್ದರು.

ಸಿ.ಐ.ಟಿ.ಯು. ದ. ಕ. ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ। ಕೆ. ಶಂಕರ್ ಸಭೆಯನ್ನುದ್ದೇಶಿಸಿ ಮಾತನಾಡಿ ಜಗತ್ತಿನ ದುಡಿಯುವ ಜನಸಮುದಾಯದ ವರ್ಗ ಜಾಗೃತಿ ಮತ್ತು ಐಕ್ಯತೆಯ ಪ್ರದರ್ಶನದ ಮೇ ದಿನದಂದು ಹಿಂದೆ ನಡೆದ ಹೋರಾಟದ ಅನುಭವ ಪಡೆದು, ಹೆಚ್ಚು ಸಂಘಟಿತರಾಗಿ ಕಾರ್ಮಿಕರು ಮುನ್ನಡೆಯುವುದು ಅತ್ಯವಶ್ಯ ಎಂದರು.

ಸಿ. ಐ. ಟಿ. ಯು. ದ. ಕ. ಜಿಲ್ಲಾ ಸಮಿತಿಯ ಉಪಾಧ್ಯಕ್ಷ ಕಾಂ॥ ಬಿ. ಮಾಧವರವರು ಮಾತನಾಡುತ್ತಾ, ವಿಶ್ವದ ಕಾರ್ಮಿಕವರ್ಗ ಯುದ್ಧ ಅಪಾಯದ ವಿರುದ್ಧ ಎಚ್ಚೆತ್ತು ತನ್ನ ಐತಿಹಾಸಿಕ ಕರ್ತವ್ಯ ಪೂರೈಸಲು ಮುಂದಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಂ॥ ಅಬ್ರಹಾಂ ಕರ್ಕಡ್ ಅವರು ಮಾತನಾಡುತ್ತಾ, ಸಂಘಟಿತ ಕಾರ್ಮಿಕವರ್ಗ ತನ್ನ ಹಕ್ಕುಗಳ ರಕ್ಷಣೆಗಾಗಿ ಮತ್ತು ಬೇಡಿಕೆಗಳ ಈಡೇರಿಕೆಗಾಗಿ ಹೋರಾಡುವಾಗ ಕೃಷೀ ಉತ್ಪನ್ನಗಳಿಗೆ ನ್ಯಾಯವಾದ ಬೆಲೆ ದೊರಕಬೇಕು ಮುಂತಾದ ರೈತ-ಕೃಷೀ ಕೂಲಿಕಾರರ ಬೇಡಿಕೆಗಳಿಗೂ ಹೋರಾಡಬೇಕು ಎಂದರು.

ಕೊನೆಯಲ್ಲಿ ಕಾಂ॥ ಶಿವಾನಂದ ಕೋಡಿ ವಂದಿಸಿದರು.

ಪುತ್ತೂರು :

3 4-82 ರಂದು ಪುತ್ತೂರಿನಲ್ಲಿ ಸಿ. ಐ. ಟಿ. ಯು. ಮತ್ತು ರಸ್ತೆಸಾರಿಗೆ ನೌಕರರ ಸಂಘ (ಎ.ಐ.ಟಿ.ಯು.ಸಿ.) ದ ಆಶ್ರಯದಲ್ಲಿ ಮೇ ದಿನವನ್ನು ಆಚರಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ॥ ಬಿ. ರಾಮಕೃಷ್ಣ ವಹಿಸಿದ್ದರು. ಆರಂಭದಲ್ಲಿ ಕಾಂ। ವಿಲ್‌ಫ್ರೆಡ್ ಸ್ವಾಗತಿಸಿದರು.

ಸಭೆಯನ್ನುದ್ದೇಶಿಸಿ, ಸ್ವಾತಂತ್ರ್ಯ ಹೋರಾಟಗಾರ ಕಾಂ॥ ಪರಮೇಶ್ವರ ನಂಬೀಶನ್, ಕಾಂ॥ ಗೋಪಾಲ್‌ಶೆಟ್ಟಿ ಇವರುಗಳು ಮಾತನಾಡಿ ಚಾರಿತ್ರಿಕ ಮೇ ದಿನದ ಮಹತ್ವವನ್ನು ವಿವರಿಸಿದರು.

ಕಾಂ॥ ಬಿ. ರಾಮಕೃಷ್ಣ ಅವರು ಮಾತನಾಡುತ್ತಾ, ಐಕ್ಯ ಹೋರಾಟ–ಐಕ್ಯಕಾರ್ಯಾಚರಣೆಯಿಂದ ಮಾತ್ರ ಫಲ ದೊರೆಯಲು ಸಾಧ್ಯ ಎಂದರು. ಮೇ ದಿನಾಚರಣೆಯಂದು ಮಂಡಿಸಲಾದ ಬೇಡಿಕೆಗಳ ಠರಾವನ್ನು ಓದಿಹೇಳಿದರು.

ಬೀದರ್ :

ಪ್ರತಿಸಲದಂತೆ 1-5-82 ರಂದು ಬೀದರ್‌ನಲ್ಲಿ ಮೇ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಸಾಯಂಕಾಲ ನಗರದ ಅಂಬೇಡ್ಕರ್ ಚೌಕದಿಂದ ಬೃಹತ್ ಮೆರವಣಿಗೆ ಹೊರಡಿಸಲಾಯಿತು. ಮೆರವಣಿಗೆಯುದ್ದಕ್ಕೂ ಬಾಲಕರಾದ ರಾಜೇಶ್, ರಾಕೇಶ್, ಅನಿಲ್, ಮತ್ತು ಮಹೇಶ್ ಮೊದಲಾದವರು ಕ್ರಾಂತಿ ಗೀತೆಗಳನ್ನು ಹಾಡುತ್ತಾ ಜನರ ಮನಸೆಳೆದರು. ಮೆರವಣಿಗೆಯ ನೇತೃತ್ವವನ್ನು ಕಾಂ। ಸುಂದರ್‌ರಾಜ್, ಸಂಗ್ರಾಮ್, ಸಂಗಶೆಟ್ಟಿಪಾಟೀಲ್, ಶಿವಶೆಟ್ಟಿ, ಚಲುವಾ ಇವರುಗಳು ವಹಿಸಿದ್ದರು. ಮೆರವಣಿಗೆಯಲ್ಲಿ ಕಾರ್ಮಿಕರು, ಮಹಿಳೆಯರು, ಕೃಷಿ ಕಾರ್ಮಿಕರು, ಯುವಜನರು ಪಾಲ್ಗೊಂಡಿದ್ದರು

ಅನಂತರ ನಡೆದ ಸಭೆಯನ್ನುದ್ದೇಶಿಸಿ ಸಿ. ಪಿ. ಐ. (ಎಂ) ಜಿಲ್ಲಾ ಕಾರ್ಯದರ್ಶಿ ಕಾಂ॥ ಸುಂದರರಾಜ್, ಸಂಗಶೆಟ್ಟಿ ಪಾಟೀಲ್ ಮತ್ತು ಸಂಗ್ರಾಮ್ ಇವರುಗಳು ಮಾತನಾಡಿ ಮೇ ದಿನದ ಮಹತ್ವ ವಿವರಿಸಿದರು.

ಶಿಡ್ಲಘಟ್ಟ :

2-5-82 ರಂದು ಕೋಲಾರ ಜಿಲ್ಲೆಯ ಶಿಡ್ಲಘಟ್ಟದಲ್ಲಿ ಜನರಲ್ ವರ್ಕರ್ಸ್ ಯೂನಿಯನ್ನಿನ ಆಶ್ರಯದಲ್ಲಿ ಮೇ ದಿನ ಆಚರಿಸಲಾಯಿತು. ಈ ಕಾರ್ಯಕ್ರಮದ ಅಂಗವಾಗಿ ನಡೆದ ಬೃಹತ್ ಮೆರವಣಿಗೆಯಲ್ಲಿ ಶಾಲಾ ಬಾಲ-ಬಾಲಕಿಯರು, ಕಾರ್ಮಿಕರು, ಮಹಿಳೆಯರು, ಕೃಷಿ ಕೂಲಿಗಾರರು ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಕೋಲಾರ ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಕಾಂ॥ ಪಾಪಣ್ಣ ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾದ ಕಾಂ॥ ಎಸ್ ಲಕ್ಷ್ಮಯ್ಯ, ಸಿ ಪಿ. ಐ. (ಎಂ) ಜಿಲ್ಲಾ ಘಟಕದ ಕಾರ್ಯದರ್ಶಿ ಕಾಂ॥ ದೊರೆಸ್ವಾಮಿ, ಕಾರ್ಮಿಕ ಮುಖಂಡ ಕಾಂ॥ ಕಾಂತ್‌ರಾಜ್ ಮೊದಲಾದವರು ಮಾತನಾಡಿ ಅಂತರರಾಷ್ಟ್ರೀಯ ಕಾರ್ಮಿಕ ಸೌಹಾರ್ದತಾ ದಿನಾಚರಣೆಯ ಮಹತ್ವ ವಿವರಿಸಿದರು.

ಸತ್ತೂರು :

ಧಾರವಾಡದ ಪಕ್ಕದ ಕೈಗಾರಿಕಾ ಕೇಂದ್ರವಾದ ಸತ್ತೂರಿನಲ್ಲಿ ವಿವಿಧ ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಮೇ ದಿನವನ್ನು ಆಚರಿಸಲಾಯಿತು. ಕ್ರಾಂತಿ ಗೀತೆಗಳೊಂದಿಗೆ ಮಿನಾಕ್ಷಿ ಆಯಿಲ್ ಮಿಲ್‌ನಿಂದ ಪ್ರಾರಂಭವಾದ ಮೆರವಣಿಗೆ ಆಕರ್ಷಣೀಯವಾಗಿತ್ತು. ಸ್ಥಳೀಯ ಮಾರುತಿ ದೇವಸ್ಥಾನದ ಎದುರಿನ ಬಯಲಿನಲ್ಲಿ ಬಹಿರಂಗಸಭೆ ನಡೆಯಿತು.

ಸಭೆಯನ್ನುದ್ದೇಶಿಸಿ ಮೈಸೂರು ಕಿರ್ಲೋಸ್ಕರ್ ಸತ್ತೂರು ಘಟಕದ ಕಾರ್ಮಿಕರ ಮುಖಂಡರಾದ ಕಾಂ॥ ಎಚ್. ಎಸ್. ಬ್ಯಾಟಗಾರ್, ಅಣ್ಣಾರಾವ್ ಮಾತನಾಡಿ ಎಲ್ಲ ವಿಭಾಗದ ಜನರೂ ಜಾಗೃತರಾಗಿ ಐಕ್ಯಹೋರಾಟದಿಂದ ಶೋಷಣಾರಹಿತ ಸಮಾಜ ನಿರ್ಮಾಣಕ್ಕಾಗಿ ಪಣ ತೊಡಲು ಕರೆ ನೀಡಿದರು.

ಆರಂಭದಲ್ಲಿ ಮೀನಾಕ್ಷೀ ಆಯಿಲ್ ಮಿಲ್‌ನ ಕಾರ್ಮಿಕ ಮುಖಂಡ ಕಾಂ। ವಿ ಆರ್. ಜಾಧವ್ ಸ್ವಾಗತಿಸಿದರು. ಕಾಂ। ಚನ್ನಬಸವಣ್ಣ ವಂದಿಸಿದರು.

ಪರಿಸರ

○ ಆರನೇ ಯೋಜನೆ ತೀವ್ರ ಕಷ್ಟದಲ್ಲಿದೆ ಎಂದು ಬಹಳ ಸಮದಿಂದ ಸರ್ವವಿದಿತವಾಗಿತ್ತು. ಆದರೆ ಸರಕಾರ ಇದಕ್ಕೆ ಪರಿಹಾರ ಮಾರ್ಗಗಳನ್ನು ಹುಡುಕುವುದು ಹೋಗಲಿ, ಇದನ್ನು ಒಪ್ಪಿಕೊಳ್ಳಲೂ ನಿರಾಕರಿಸುತ್ತಿತ್ತು. ಇತ್ತೀಚೆಗೆ ಯೋಜನಾ ಮಂತ್ರಿ ತಮ್ಮ ಸಚಿವ ಖಾತೆಗೆ ಸೇರಿದ ಸಲಹಾ ಸಮಿತಿ ಯೆದುರು ಇದನ್ನು ಒಪ್ಪಿಕೊಂಡಿದ್ದಾರೆ.

—ಇಂಡಿಯನ್ ಎಕ್ಸ್‌ಪ್ರೆಸ್, ಏ. 30

○ ಇಂದಿನ ಅರ್ಥಿಕ ಅವ್ಯವಸ್ಥೆಗೆ ಹಿಂದಿನ ಬೇರೆ ಪಕ್ಷಗಳ ಸರಕಾರಗಳೇ ಕಾರಣವೆಂದು ಇಂದಿರಾ ಗಾಂಧಿ ಮೊದಲುಗೊಂಡು ಎಲ್ಲಾ ಕೇಂದ್ರ ನಾಯಕರೂ ದೂಷಿಸುವುದು ಹಳೆಯ ರಾಗ. ಈಗ ಬಾಬಾ ಸಾಹೇಬ್ ಭೋಸಲೆ ಅವರು ಹೊಸದೊಂದು ರಾಗವನ್ನೇ ತೆಗೆದಿದ್ದಾರೆ. ಮಹಾರಾಷ್ಟ್ರದ ಅಭೂತಪೂರ್ವ ಓವ್ಹರ್‌ಡ್ರಾಫ್ಟ್‌ಗೆ ಅಂತುಳೆ ಅವರೇ ಕಾರಣವೆಂದು ಅವರ ದೂಷಣೆ.

—ಪ್ರಜಾವಾಣಿ, ಏಪ್ರಿಲ್ 30

○ ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ಬಿ. ಜೆ ಪಿ. ನಾಯಕರು ಗೋಕಾಕ್ ಸಮಿತಿ ವರದಿಯನ್ನು ಬೆಳಗಾವಿ ಮತ್ತು ಇತರ ಗಡಿಪ್ರದೇಶದ ಜನರ ಮೇಲೆ ಹೇರುವುದನ್ನು ವಿರೋಧಿಸಿ ಒಂದು ನಿರ್ಣಯಮಂಡಿಸಿ, ಅದು ಅವಿರೋಧವಾಗಿ ಮಂಜೂರಾಯಿತು. ಇದು ಕರ್ನಾಟಕದಲ್ಲಿ ಬಿ. ಜೆ. ಪಿ. ನಾಯಕ ಎ. ಕೆ. ಸುಬ್ಬಯ್ಯ ಗೋಕಾಕ್ ಸಮಿತಿಯನ್ನು ಯಥಾವತ್ತಾಗಿ ಜಾರಿಗೆ ಬರಬೇಕೆಂದು ಪ್ರತಿಪಾದಿಸುವ ಹಿನ್ನೆಲೆಯಲ್ಲಿ ತಮಾಷೆಯಾಗಿ ಕಾಣುತ್ತದೆ.

ತಾನು ಕಾಂಗ್ರೆಸ್‌ಗೆ ರಾಷ್ಟ್ರೀಯ ಪರ್ಯಾಯ, ರಾಷ್ಟ್ರೀಯ ಐಕ್ಯತೆಯ ಪಕ್ಷಪಾತಿ ಎಂಬ ಬಿ ಜೆ ಪಿ. ನಿಲುವು ಎಷ್ಟು ನಿಜ ಎಂಬುದು ಇದರಿಂದ ಬಯಲಾಗಿದೆ. ಅಷ್ಟೇ ಅಲ್ಲ, ಬೇರೆ ಪಕ್ಷಗಳ ಹಾಗೆಯೇ ಬೇರೆ ಬೇರೆ ಪ್ರದೇಶ/ಸಂದರ್ಭಗಳಲ್ಲಿ ತಮಗೆ ತಕ್ಷಣದ ಪ್ರಯೋಜನವಾಗುವುದಾದರೆ ತಮ್ಮ ನಿಲುವುಗಳನ್ನು, ನೀತಿಗಳನ್ನು (ಅಂತಹದೇನಾದರೂ ಇದ್ದರೆ) ಗಾಳಿಗೆ ತೂರಲು, ಭಾಷೆ/ಪ್ರಾದೇಶಿಕ ಸಂಕುಚಿತವಾದ ಮತ್ತು ಅಗ್ಗದ ಜನಪ್ರಿಯತೆಗೆ ಏನೂ ಮಾಡಲು ಬಿ. ಜೆ. ಪಿ. ಹಿಂದೆ ಮುಂದೆ ನೋಡುವುದಿಲ್ಲ ಎಂದು ಸ್ಪಷ್ಟವಾಗಿದೆ.

— ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಓದುಗರ ಪತ್ರ, ಮೇ 4.

○ ಕಾಸರಗೋಡಿನ ಕರ್ನಾಟಕ ಏಕೀಕರಣ ಸಮಿತಿ ಕಾಂಗ್ರೆ ನಾಯಕತ್ವದ ರಂಗಕ್ಕೆ, ಕಾಸರಗೋಡಿನ 3 ಕ್ಷೇತ್ರಗಳಲ್ಲಿ ತನ್ನ ಬೆಂಬಲ ಸೂಚಿಸಿದೆ... ಆದರೆ ಇದು ಎಷ್ಟರಮಟ್ಟಿಗೆ ಪರಿಣಾಮ ಬೀರಬಹುದೆಂಬುದರ ಬಗ್ಗೆ ಸಮಿತಿಯ ಸದಸ್ಯರಿಗೆ ಸಂಶಯ ತಲೆದೋರಿದೆ. ಏಕೆಂದರೆ ಕಾಂಗ್ರೆ ರಂಗದ ಮೂವರೂ ಅಭ್ಯರ್ಥಿಗಳೂ ಕನ್ನಡಿಗರಲ್ಲ. ಅದರಲ್ಲೂ ಮಂಜೇಶ್ವರದಿಂದ ಸ್ಪರ್ಧಿಸುತ್ತಿರುವ ಎಸ್. ರಾಮಕೃಷ್ಣನ್ ಕಾಸರಗೋಡು ಕರ್ನಾಟಕ ಸೇರುವುದನ್ನು ವಿರೋಧಿಸುತ್ತಾ ಬಂದವರು. ಸಾಲದ್ದಕ್ಕೆ ಎಡ-ಪ್ರಜಾಸತ್ತಾತ್ಮಕ ರಂಗದ ಅಭ್ಯರ್ಥಿಗಳು ಕನ್ನಡಿಗರು.

— ಇ. ಎನ್. ಎಸ್. ಮೇ 4

● ಪೋಲಿಸ್ ಹುದ್ದೆಗಳ ಸ್ಥಾನಮಾನ ಏರಿಕೆಯ ಸುದ್ದಿಯ ಹೊಳೆಯೇ ಹರಿದಿರುವಾಗ ರಾಜಧಾನಿಯ ಜನರ ನೆಮ್ಮದಿಗೆ ನಿತ್ಯಭಂಗ ಬರುತ್ತಿರುವುದು ಒಂದು ವಿಪರ್ಯಾಸ. ಇಲಾಖೆ ಇರುವುದು ಕೆಲವು ಅಧಿಕಾರಿಗಳ ಸ್ಥಾನಮಾನಕ್ಕಾಗಿಯೋ, ಜನರ ರಕ್ಷಣೆಗಾಗಿಯೋ ಎಂದು ಜನ ಕೇಳುವಂತಾಗಿದೆ.

—ಪ್ರಜಾವಾಣಿ, ಮೇ 5

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore-560 053. Editorial and managerial office :L-56, K. V. Temple Street, Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR ; M. K. BHAT.